ಜುಲೈ – ಸೆಪ್ಟೆಂಬರ್–2019

ಸಂಪುಟ : 1 ಸಂಚಿಕೆ : 3

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

# KRUSHI VANA

*Quarterly news letter*

July - September 2019

Price: Rs.20.00



“ಕೃಷಿವನ” ಜುಲೈ – ಸೆಪ್ಟೆಂಬರ್ 2019 ತ್ರೈಮಾಸಿಕ ವಾರ್ತಾಪತ್ರ

# ಕೃಷಿ-ಅರಣ್ಯದಲ್ಲಿ ತೋಟಗಾರಿಕಾ ಮರಗಳ ಉತ್ತೇಜನ

ಸಂಪಾದಕೀಯ...



ಹಿಂದಿನ ಕೃಷಿವನದ ಸಂಚಿಕೆಯಲ್ಲಿ (ಏಪ್ರಿಲ್–ಜೂನ್ 2019), ಕೃಷಿ–ಅರಣ್ಯದ ಮಹತ್ವ, ತನ್ಮೂಲಕ ಕೃಷಿ ಅಭಿವೃದ್ಧಿಯ ಬಗ್ಗೆ ವಿವರಿಸಲಾಗಿತ್ತು. ಮುಂಬರುವ ವರ್ಷಗಳಲ್ಲಿ ಕೃಷಿ–ಅರಣ್ಯಗಳು ಪರಿಸರ ರಕ್ಷಣೆಯ ಜೊತೆಗೆ ಕರ್ನಾಟಕ ರಾಜ್ಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಲಿವೆ. ಇದರಿಂದ ಇತರೆ ರಾಜ್ಯಗಳು ಅನುಭವಿಸುತ್ತಿರುವ ಅತಿವೃಷ್ಟಿ, ಅನಾವೃಷ್ಟಿ ಹಾಗೂ ಹೆಚ್ಚಿದ ತಾಪಮಾನದಂತಹ ಪ್ರಕೃತಿ ವಿಕೋಪಗಳನ್ನು ನಿಯಂತ್ರಿಸುವಲ್ಲಿಯೂ ಸಹ ತನ್ನದೇ ಆದ ಕೊಡುಗೆಯನ್ನು ನೀಡಲಿವೆ. ಇಂತಹ ಪ್ರಕೃತಿ ವಿಕೋಪಗಳನ್ನು ಮರಗಳು ಕೃಷಿ ಬೆಳೆಗಿಂತ ಸಮರ್ಥವಾಗಿ ನಿಭಾಯಿಸಬಲ್ಲವು ಹಾಗೂ ತೇವಾಂಶವನ್ನು ರಕ್ಷಿಸುವುದರ ಮುಖಾಂತರ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲಿವೆ. ಬಯಲು ಸೀಮೆಯ ಹಾಗೂ ಬರಪೀಡಿತ ಪ್ರದೇಶಗಳಲ್ಲಿಯ ಕೃಷಿ ಜಮೀನುಗಳು ಕೃಷಿ ಬೆಳೆಗಳಿಗಿಂತ ಕೃಷಿ ಅರಣ್ಯದ ಮರಗಳಿಗೆ ಹೆಚ್ಚಿನ ರೀತಿಯಲ್ಲಿ ಸ್ಪಂದಿಸುವುವು. ಕೃಷಿ ಭೂಮಿಯಲ್ಲಿ ಅರಣ್ಯ ಬೆಳೆಸುವ ಕಾರ್ಯಕ್ರಮಗಳು ಹೆಚ್ಚು ರೈತರಿಗೆ ಉತ್ತೇಜನಕಾರಿಯಾಗಿದ್ದಲ್ಲಿ ರೈತರ ಪ್ರಶಂಸೆಗೆ ಪಾತ್ರವಾಗುವುದ ರೊಂದಿಗೆ ಅರಣ್ಯದ ಮರಗಳಿಂದಾಗುವ ಆರ್ಥಿಕ ಲಾಭದ ಬಗ್ಗೆಯೂ ಸಹ ಪೂರ್ಣ ಮನವರಿಕೆ ಮಾಡಿಕೊಡುವುದು ಕೃಷಿ–ಅರಣ್ಯ ಕಾರ್ಯಕ್ರಮದ ಯಶಸ್ಸಿಗೆ ದಾರಿ ದೀಪವಾಗುವುದು. ರೈತರ ಇಚ್ಚೆಯನುಸಾರ ವಿವಿಧ ಜಾತಿಯ ಮರಗಳ ಉತ್ತಮ ಸಸಿಗಳ ಲಭ್ಯತೆ, ಅದರಲ್ಲೂ ವಿಶೇಷವಾಗಿ ಆರ್ಥಿಕ ಲಾಭ ತರುವ ಹಣ್ಣಿನ ಮರಗಳ ಫಸಲಿಗೆ ಉತ್ತಮ ಬೆಲೆ ಸಿಗುವುದು ಹಾಗೂ ಮಾರುಕಟ್ಟೆ ಸೌಲಭ್ಯ ಕಲ್ಪಿಸುವುದು ಪ್ರಮುಖವಾಗಿರುತ್ತದೆ.

ಕೃಷಿ–ಅರಣ್ಯಗಳ ಪ್ರಮುಖ ಗುರಿಯೆಂದರೆ ಕೃಷಿ ಭೂಮಿಯಲ್ಲಿ ಹೆಚ್ಚಿನ ಸಂಖ್ಯೆಯ ಮರಗಳನ್ನು ಬೆಳೆಸುವುದಾಗಿದೆ. ಮರಗಳೆಂದರೆ ಕೇವಲ ಅರಣ್ಯದಲ್ಲಿ ಬೆಳೆಯುವ ಹಾಗೂ ಅರಣ್ಯ ಇಲಾಖೆ ಬೆಳೆಸುವ ಮರಗಳಾಗಿರಬೇಕೆಂದೇನಿಲ್ಲ, ಯಾವುದೇ ಮರಗಳಾದರೂ ಬಹುವಾರ್ಷಿಕ ಬೆಳೆಯಾಗಿದ್ದು ಹಣ್ಣು ಬಿಡುವಂತಹ ಹಾಗೂ ಗಟ್ಟಿಯಾದ ಕಾಂಡವನ್ನು ಹೊಂದಿರುವುದು ಮುಖ್ಯವೆನಿಸುತ್ತದೆ. ತೋಟಗಾರಿಕಾ ಮರಗಳು ಈ ಎರಡೂ ಅಂಶಗಳನ್ನೂ ಒಳಗೊಂಡಿರುವವು (ಪಪ್ಪಾಯ ಹಾಗೂ ಬಾಳೆ ಗಿಡಗಳನ್ನು ಬಿಟ್ಟು).

ತೋಟಗಾರಿಕಾ ಬೆಳೆಗಳಾದ ಮಾವು, ಹಲಸು, ನೇರಳೆ, ನೆಲ್ಲಿ, ಸೀಬೆ, ದಾಳಿಂಬೆ, ನಿಂಬೆ, ಚಕ್ಕೋತ, ಕಿತ್ತಳೆ, ಮೋಸಂಬಿ, ಸಪೋಟ, ಸೀತಾಫಲ, ರಾಮಫಲ, ಬೋರೆ, ಅವಕ್ಯಾಡೋ, ನುಗ್ಗೆ, ನಕ್ಷತ್ರ ಹಣ್ಣು (Star fruit, carambola), ಅಂಜೂರ, ಮುರುಗಲ (ಪುನರ್‌ಪುಳಿ) ಬೇಲ, ಹುಣಸೆ, ಬಿಲ್ವದಂತಹ ಮರಗಳನ್ನು ಮಣ್ಣಿನ ಗುಣಧರ್ಮಕ್ಕನುಗುಣವಾಗಿ ಬೆಳೆಸುವುದರಿಂದ ಹೆಚ್ಚಿನ ಆರ್ಥಿಕ ಲಾಭ ಪಡೆಯಲು ಸಾಧ್ಯ. ಇವುಗಳ ಜೊತೆಗೆ ಸಂಪಿಗೆ, ಬೇವು, ಹಾಲೆ, ಹೊಂಗೆಯಂತಹ ಮರಗಳು ನಿರಂತರವಾಗಿ ಆದಾಯ ಪಡೆಯಲು ಸೂಕ್ತವಾಗಿವೆ. ಇಂತಹ ಅನೇಕ ತೋಟಗಾರಿಕಾ ಮರಗಳು ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಹಾಗೂ ನಿರಂತರ ಬರಪೀಡಿತ ಪ್ರದೇಶದಲ್ಲಿ ಕೃಷಿ ಬೆಳೆಗಳಿಗಿಂತಲೂ ಹೆಚ್ಚಿನ ಆದಾಯ ತರಬಲ್ಲವು.

ತೋಟಗಾರಿಕಾ ಇಲಾಖೆಯು ರಾಜ್ಯದ ರೈತರ ಹಿತದೃಷ್ಟಿಯಿಂದ, ರೈತರ ಅವಶ್ಯಕತೆಗನುಗುಣವಾಗಿ ಮೇಲೆ ತಿಳಿಸಿರುವ ವಿವಿಧ ಜಾತಿಯ ಉತ್ತಮ ತಳಿಯ ಮರಗಳನ್ನು ಕೃಷಿ–ಅರಣ್ಯವಾಗಿ ಬೆಳೆಸಲು ಉತ್ತೇಜನ ನೀಡುವುದರ ಮುಖಾಂತರ ಅರಣ್ಯ ಸಂರಕ್ಷಣೆಗೆ ಹಾಗೂ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವುದು ಇಂದಿನ ಅವಶ್ಯಕತೆಗಳಲ್ಲೊಂದಾಗಿದೆ. ಅರಣ್ಯ ಇಲಾಖೆ ತೋಟಗಾರಿಕಾ ಇಲಾಖೆಯ ಸಹಯೋಗದೊಂದಿಗೆ ಜವಾಬ್ದಾರಿ ತೆಗೆದುಕೊಂಡು ಇಲಾಖೆಯಲ್ಲಿ ಹಾಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳೊಂದಿಗೆ ರೈತರ ಅವಶ್ಯಕತೆಯನ್ನು ಗಣನೆಗೆ ತೆಗೆದುಕೊಂಡು ವಿವಿಧ ಜಾತಿಯ ಉತ್ತಮ ತಳಿಗಳ ಸಸಿಗಳನ್ನು ಸಸ್ಯ ಕ್ಷೇತ್ರದಲ್ಲಿ ಬೆಳೆದು, ಪ್ರತಿವರ್ಷ ಪೂರೈಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕಾಗಿದೆ.

– ಶ್ರೀ. ದೀಪಕ್ ಶರ್ಮಾ ಭಾ.ಅ.ಸೇ(ನಿವೃತ್ತ)
ಸಂಪಾದಕರು

## ಅರಣ್ಯ–ಕೃಷಿಗೆ ಆದ್ಯತೆ:

**ಅರಣ್ಯ ಕೃಷಿ ಪ್ರೋತ್ಸಾಹ ಯೋಜನೆಯಡಿ ಪ್ರತಿ ರೈತರಿಗೆ 400 ಸಸಿಗಳನ್ನು ನಿಗದಿ ಮಾಡಿದ್ದು, ಯೋಜನೆ ಹೊರತುಪಡಿಸಿ ಸಾಮಾನ್ಯರು ಎಕರೆಗೆ 160 ಸಸಿಗಳನ್ನು ಪಡೆಯಬಹುದಾಗಿದೆ. ಸಸಿಗಳನ್ನು ಸಮರ್ಪಕವಾಗಿ ಪಾಲನೆ ಮಾಡುವವರಿಗೆ ಮಾತ್ರ ಈ ಸೌಲಭ್ಯ ದೊರೆಯಲಿದೆ, ಇತ್ತೀಚಿನ ದಿವಸಗಳಲ್ಲಿ ಕೃಷಿ ಅರಣ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಿದ್ದು, ಜಮೀನಿನಲ್ಲಿ ಮರಗಳನ್ನು ಬೆಳೆಸಿ ಮಧ್ಯದಲ್ಲಿ ತೋಟಗಾರಿಕಾ ಬೆಳೆಯನ್ನು ಬೆಳೆಯುವ ಪದ್ಧತಿ ಚಾಲ್ತಿಯಲ್ಲಿದ್ದು ಅಂತಹ ರೈತರಿಗೂ ಸಸಿಗಳನ್ನು ವಿತರಣೆ ಮಾಡಲಾಗುವುದು. ಕೃಷಿ–ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಸಿಗಳನ್ನು ಪಡೆಯಲು ರೈತರು ಇಲಾಖೆಗೆ ಅರ್ಜಿಯನ್ನು ಸಲ್ಲಿಸಬಹುದು.**

# ಕೃಷಿವನ

ತ್ರೈ ಮಾಸಿಕ ವಾರ್ತಾಪತ್ರ

Volume : 1 Issue : 3

ಸಂಪುಟ : 1 ಸಂಚಿಕೆ : 3



## ಸಂಪಾದಕ ಮಂಡಳಿ

### ಗೌರವ ಸಂಪಾದಕರು

ಶ್ರೀ ಎನ್.ಸಂಪಗಿ, ಭಾ.ಅ.ಸೇ(ನಿ)

### ಸಂಪಾದಕರು

ಶ್ರೀ ದೀಪಕ್ ಶರ್ಮಾ, ಭಾ.ಅ.ಸೇ(ನಿ)

### ಉಪ ಸಂಪಾದಕರು

ಶ್ರೀ.ಹೆಚ್.ಜಿ.ಶಿವಾನಂದಮೂರ್ತಿ, ಭಾ.ಅ.ಸೇ(ನಿ),

### ಸದಸ್ಯರು

ಶ್ರೀ ಎ.ಎಂ.ಅಣ್ಣಯ್ಯ, ಭಾ.ಅ.ಸೇ(ನಿ)

ಡಾ. ಎನ್.ಸ್ವಾಮಿ ರಾವ್

ಡಾ. ಎಮ್. ಮಹಾದೇವ ಮೂರ್ತಿ.

ಶ್ರೀಮತಿ ಶೋಭಾ.ಎಚ್.ಜಿ



### ಕಛೇರಿ ವಿಳಾಸ:

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)

ವನವಿಕಾಸ, ನೆಲಮಹಡಿ,

18ನೇ ಅಡ್ಡರಸ್ತೆ, ಮಲ್ಲೇಶ್ವರಂ,

ಬೆಂಗಳೂರು–560003

ದೂ: 080 23566126

Email: iaftbangalore@gmail.com



Publisher : **IAFT**

**Editor- Dipak Sharma, IFS(R)**

**KRUSHI VANA**

**Quarterly *news* letter**

**July to September 2019**

Printed by : **S.K.CHANDRASHEKAR,**

**Rathna Offset Printers, #.120,**

**1st Main Road,**

**Cavery Nadhi Road,**

**Bridavan Nagar,**

**Bangalore-560019**


ಉತ್ತಮ ಗುರು ತನ್ನ ಶಿಷ್ಯರಿಂದಲೇ ಕಂಡು ಹಿಡಿಯಲ್ಪಡುತ್ತಾನೆ.
ಯಾವ ಶಿಷ್ಯ ಗುರುವಿಗಿಂತ ಮುಂದೆ ಹೋಗುತ್ತಾನೋ ಅವನೇ ಉತ್ತಮ ಗುರು.

– ವಿನೋಬಾ ಭಾವೆ

## ಸದಸ್ಯತ್ವ.

ಸಂಸ್ಥೆಯ ಸದಸ್ಯತ್ವ ಎನ್ನುವಂತಹದ್ದು ಸಂಸ್ಥೆ / ವೈಯಕ್ತಿವಾಗಿ ಶಾಸ್ತ್ರೀಯ ಅರಣ್ಯೀಕರಣ ಯೋಜನೆಯಲ್ಲಿ ಆಸಕ್ತಿ ಹೊಂದಿದ್ದವರಿಗೆ ತೆರೆದಿರುತ್ತದೆ.

| ಸದಸ್ಯತ್ವದ ಕ್ರಮ | ಪ್ರವೇಶ ಶುಲ್ಕ |
|---|---|
| ಸಾಂಸ್ಥಿಕ ಸದಸ್ಯತ್ವ | 25,000–00 ರೂ |
| ಆಶ್ರಯದಾತ ಸದಸ್ಯತ್ವ | 20,000–00 ರೂ |
| ಜೀವಮಾನ ಸದಸ್ಯತ್ವ | 5,000–00 ರೂ |
| ಭಾಗೀದಾರ ಸದಸ್ಯತ್ವ | 2,000–00 ರೂ |
| ಸಾಮಾನ್ಯ ಸದಸ್ಯತ್ವ | 100–00 ರೂ |

ವಾರ್ತಾಪತ್ರದ ಚಂದಾ ವಿವರಗಳು –ಅಂಚೆವೆಚ್ಚ ಸೇರಿ

ಬಿಡಿ ಪ್ರತಿ: ರೂ. 20

ವಾರ್ಷಿಕ : ರೂ. 100

### ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)

ವನವಿಕಾಸ, ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಮನವಿ:

ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)ಯು ಅಸ್ತಿತ್ವದಲ್ಲಿದ್ದು, ರೈತರ ಅಭಿವೃದ್ಧಿಗಾಗಿ ಮತ್ತು ಅರಣ್ಯಗಳನ್ನು ಉಳಿಸಿ ಬೆಳೆಸುವುದಕ್ಕಾಗಿ ಇರುವಂತಹ ಈ ಸಂಸ್ಥೆಯು ಮರ ಬೆಳೆಸುವ ಮೂಲಕ ರೈತರ ಮತ್ತು ರಾಜ್ಯದ ಸಮೃದ್ಧಿ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿ, ಕರ್ನಾಟಕ ರೈತರ ವ್ಯವಸಾಯಕ್ಕೆ ಅಯೋಗ್ಯವಾದ ಬೀಳು ಭೂಮಿಯಲ್ಲಿಯೂ ಬೆಲೆ ಬಾಳುವ ಮರಗಳನ್ನು ಬೆಳೆಸಿ ಗ್ರಾಮೀಣ ಕುಟುಂಬಗಳ ಏಳ್ಗೆಗೂ ಪರಿಸರ ಸಂತುಲನಕ್ಕೂ ಅವಕಾಶ ಮಾಡಿ ಮರಗಳ ಸಹಾಯದಿಂದ ರಾಜ್ಯದ ಅಭಿವೃದ್ಧಿಗೆ ಸಹಾಯಕವಾಗುವ ಯೋಜನೆಗಾಗಿ ಸ್ಥಾಪಿಸಿರುವ ಸಂಸ್ಥೆಯಿದು.

ಇಲ್ಲಿ ಸ್ವಯಂ ಇಚ್ಛೆಯಿಂದ ಸೇವೆ ಮಾಡಲಿಚ್ಛಿಸುವ ಯಾವುದೇ ನಿವೃತ್ತರು, ಹಿರಿಯ ನಾಗರಿಕರು ಈ ಕೆಳಗಿನ ವಿಳಾಸವನ್ನು ಮತ್ತು ದೂರವಾಣಿಯನ್ನು ಸಂಪರ್ಕಿಸಬಹುದು.

ಶ್ರೀ. ಎ.ಎಂ. ಅಣ್ಣಯ್ಯ,ಭಾ.ಅ.ಸೇ(ನಿ)
ಕಾರ್ಯದರ್ಶಿ
ಕೃಷಿ–ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ)
ದೂ: 9448019306

# ರೈತರ ಆದಾಯ ಹೆಚ್ಚಿಸಲು ಮರಗಳ ಪಾತ್ರ

ಹೆಚ್.ಜಿ.ಶಿವಾನಂದಮೂರ್ತಿ
ಐ.ಎಫ್.ಎಸ್(ನಿ)
Email:: shivanandamurthyifs@gmail.com



**ಭಾ**ರತದ ಪ್ರಧಾನಮಂತ್ರಿಗಳ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ರೈತರ ಆದಾಯ ದ್ವಿಗುಣಗೊಳಿಸುವುದು ಸಹ ಒಂದಾಗಿದೆ. ಕೃಷಿ ತೋಟಗಾರಿಕೆಯೊಂದಿಗೆ ಮರಗಳನ್ನು ಬೆಳೆಸುವುದು ಇಂದಿನ ಅವಶ್ಯಕತೆಗಳಲ್ಲೊಂದಾಗಿದೆ. ಕಾರಣ ಇಂದಿನ ದಿನಮಾನಗಳಲ್ಲಿ ತಲೆದೋರಿರುವ ಪರಿಸರದಲ್ಲಿಯ ವ್ಯತ್ಯಯಗಳು, ಒಂದೆಡೆ ಅತೀ ಹೆಚ್ಚು ಮಳೆಯಿಂದಾಗಿ ಪ್ರವಾಹ ಉಂಟಾದರೆ ಮತ್ತೊಂದೆಡೆ ಮಳೆಯ ಅಭಾವದಿಂದ ತಲೆದೋರುವ ಬರ ಪರಿಸ್ಥಿತಿ. ಈ ರೀತಿಯ ಅತೀವೃಷ್ಟಿ ಹಾಗೂ ಅನಾವೃಷ್ಟಿಗಳು ರೈತರನ್ನು ಸಂಕಷ್ಟಕ್ಕೆ ತಳ್ಳುತ್ತಿವೆ. ಇಂದು ವಾತಾವರಣದಲ್ಲಿ ನಾಗರೀಕತೆಯ ಪರಿಣಾಮದಿಂದ ಹೆಚ್ಚಾಗಿರುವ ಇಂಗಾಲಾಮ್ಲದ ಪ್ರಮಾಣ ಹಾಗೂ ಇತರೆ ಹಸಿರುಮನೆ ಅನಿಲಗಳು ಸಾರ್ವತ್ರಿಕವಾಗಿ ಜಾಗತಿಕ ಉಷ್ಣತೆಯನ್ನು ಹೆಚ್ಚಿಸುತ್ತಲೇ ಇವೆ. ಪರಿಣಾಮ ಕೃಷಿ ಬೆಳೆಯಲ್ಲಿ ಇಳುವರಿ ಕಡಿಮೆಯಾಗುವುದರೊಂದಿಗೆ ಬೆಳೆಗಳಲ್ಲಿ ಪೌಷ್ಟಿಕಾಂಶದ ಪ್ರಮಾಣ ಸಹ ಕಡಿಮೆಯಾಗುತ್ತಿದೆ. ಒಂದೆಡೆ ಭೌತಿಕವಾಗಿ ಇಳುವರಿ ಕಡಿಮೆಯಾಗುತ್ತಿದ್ದು, ಜೊತೆಗೆ ಜೈವಿಕವಾಗಿ ಪೌಷ್ಟಿಕಾಂಶಗಳ ಪ್ರಮಾಣ ಕಡಿಮೆಯಾಗುತ್ತಿರುವುದು ಜನರಲ್ಲಿ ಆರ್ಥಿಕ ಸಂಕಷ್ಟಗಳನ್ನಲ್ಲದೆ ಆರೋಗ್ಯದ ಮೇಲೂ ಸಹ ಸಾಕಷ್ಟು ಪರಿಣಾಮ ಬೀರುತ್ತಿದೆ.

**"ಪರಿಸರ ಜ್ಞಾನವಿಲ್ಲದವನು ಪ್ರಳಯಕ್ಕೆ ಕಾರಣನು"** ಎನ್ನುವಂತೆ, ಹಿಂದಿನ ಹಿರಿಯರು ಪರಿಸರದ ಬಗ್ಗೆ ಅಪಾರವಾದ ಸಾಮಾನ್ಯ ಜ್ಞಾನವನ್ನು ಹೊಂದಿದ್ದರು. ಗಿಡಮರಗಳನ್ನು ಪ್ರೀತಿಸುವುದಲ್ಲದೇ ಅದಕ್ಕನುಗುಣವಾಗಿ ಕೃಷಿ ಭೂಮಿಯ ಸುತ್ತ ಸಾಕಷ್ಟು ಗಿಡ–ಮರಗಳನ್ನು ಬೆಳೆಸುತ್ತಿದ್ದರು. ಇದು ಋಷಿ ಮುನಿಗಳ ಕಾಲದಿಂದಲೂ ಮುಂದುವರೆದಿತ್ತು. ಪರಿಸರದಲ್ಲಿ ಉಂಟಾಗುವ ಬದಲಾವಣೆಗಳನ್ನು ಯಾವುದೇ ವೈಜ್ಞಾನಿಕ ಉಪಕರಣಗಳಿಲ್ಲದೇ ಅನುಭವದಿಂದಲೇ ನಿರ್ಧರಿಸುತ್ತಿದ್ದರು. ಅಂದಿನವರು ಮುಗಿಲನ್ನು ನೋಡಿ ಮಳೆ ಯಾವಾಗ ಬರುತ್ತದೆಂದು ತಿಳಿದು, ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸುತ್ತಿದ್ದರು. ಹಿಂದಿನ ದಿನ–ಮಾನಗಳಲ್ಲಿ ಪ್ರಕೃತಿಯು ಸಹ ಸಹಕರಿಸುತ್ತಿತ್ತು. ಋತುಮಾನಕ್ಕನುಗುಣವಾಗಿ ಮಳೆ ಬರುತ್ತಿತ್ತು. ಆದರೆ ಇಂದು ವೈಜ್ಞಾನಿಕವಾಗಿ ಮುಂದುವರೆದಿದ್ದರೂ ಸಹ ಮಳೆ ಬರುವ ಸಮಯ ಹಾಗೂ ಪ್ರಮಾಣವನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.

ಮಾನವನ ಅತಿಯಾದ ಆಸೆಯಿಂದ ಅರಣ್ಯ ನಾಶವಾಗಿದೆ, ಮರ–ಗಿಡಗಳನ್ನು ಕಡಿಯಲಾಗಿದೆ, ಕೃಷಿಯನ್ನು ವಿಸ್ತರಿಸಲಾಗಿದೆ, ಇದರಿಂದಾಗಿ ಇಂದು ಪ್ರಕೃತಿ ವಿಕೋಪವನ್ನು ಎದುರಿಸಬೇಕಿದೆ. ದೇಶದಲ್ಲಿ ಅತಿವೃಷ್ಟಿ ಒಂದೆಡೆಯಾದರೆ ಮತ್ತೊಂದೆಡೆ ಅನಾವೃಷ್ಟಿ ಸರ್ವೇಸಾಮಾನ್ಯವಾಗಿದೆ.

ಪ್ರಕೃತಿ ವಿಕೋಪದಂತಹ ಬರಗಾಲ, ಪ್ರವಾಹ, ಭೂಕುಸಿತದಂತಹ ಸನ್ನಿವೇಶಗಳನ್ನು ಸಮರ್ಥವಾಗಿ ಎದುರಿಸಲು, ಹಸಿರಿನ ಹೊದಿಕೆಯನ್ನು ಭೂಮಿಗೆ ಹೊದಿಸಲು ಹಲವಾರು ವರ್ಷಗಳೇ ಬೇಕಾಗಬಹುದು. ಇಂತಹ ಪವಿತ್ರವಾದ ಕೆಲಸವನ್ನು ಜನರೆಲ್ಲರೂ ಕೂಡಿ ಪ್ರಾರಂಭಿಸಬೇಕಿದೆ. ಇದರಿಂದ ಮುಂಬರುವ ವರ್ಷಗಳಲ್ಲಿ ಪ್ರಕೃತಿಯಲ್ಲುಂಟಾಗಬಹುದಾದ ಅಸಮತೋಲನವನ್ನು ಕಡಿಮೆಗೊಳಿಸಲು ಸಹಕಾರಿಯಾಗುವುದು.

ಅರಣ್ಯ ಪ್ರದೇಶದಲ್ಲಿ ಪ್ರತಿವರ್ಷವು ಅರಣ್ಯ ಇಲಾಖಾ ವತಿಯಿಂದ ಗಿಡ–ಮರಗಳನ್ನು ಬೆಳೆಸುವರು. ಅರಣ್ಯ ಪ್ರದೇಶ ತೆರೆದ ಖಜಾನೆಯಂತಿರುವುದರಿಂದ, ಅರಣ್ಯದಲ್ಲಿ ಮರಗಳನ್ನು ಕಡಿಯುವುದು, ಅರಣ್ಯ ಪ್ರದೇಶವನ್ನು ಅಭಿವೃದ್ಧಿಯ ಹೆಸರಿನಲ್ಲಿ ಅತಿಕ್ರಮಿಸುವುದರಿಂದ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ. ಇದರಿಂದ ಇಂದು **"ಅರಣ್ಯ ನಾಶ ಮಾನವನ ವಿನಾಶ"** ವೆನ್ನುವಂತಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರಕೃತಿ ವಿಕೋಪದಿಂದಾದ ಕೆಲವು ಉದಾಹರಣೆಗಳು, ಬಹುಶಃ ಸಾರ್ವತ್ರಿಕವಾಗಿ ಎಲ್ಲರ ಕಣ್ಣನ್ನು ತೆರೆಸಿದಂತಾಗಿದೆ. ಕಳೆದ ಹಾಗೂ ಪ್ರಸಕ್ತ ವರ್ಷದಲ್ಲಿ ಕೊಡಗು ಜಿಲ್ಲೆಯಲ್ಲಿ ಹಾಗೂ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಹೆಚ್ಚಿನ ಮಳೆಯಿಂದ ಉಂಟಾದ ಪ್ರವಾಹ ಹಾಗೂ ಭೂಕುಸಿತಗಳು ಪ್ರಳಯ ರೂಪದಲ್ಲಿ ಕಾಣಿಸಿಕೊಂಡಿರುವುದು ಅಲ್ಲಿಯ ಜನರನ್ನು ಸಂಕಷ್ಟಕ್ಕೀಡು ಮಾಡಿದೆ. ಇದನ್ನು ನೋಡಿದ ನಂತರವು ಜನರು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳದಿದ್ದಲ್ಲಿ, ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಇದುವರೆಗೂ ಅರಣ್ಯ ಇಲಾಖಾ ಸಿಬ್ಬಂದಿ ಹಾಗೂ ಪರಿಸರ ಪ್ರಿಯರು ಅರಣ್ಯಗಳ ಮತ್ತು ಪರಿಸರದ ಬಗ್ಗೆ ಏನೇ ಹೇಳಿದರೂ, ಅಂತೆ–ಕಂತೆಗಳೆಂದು ಎಚ್ಚೆತ್ತುಕೊಳ್ಳಲಿಲ್ಲ. ಆದರೆ ಇಂದು ಪ್ರಕೃತಿಯಲ್ಲಿ ಉಂಟಾಗುತ್ತಿರುವ ಅತಿವೃಷ್ಟಿ, ಅನಾವೃಷ್ಟಿ, ಭೂಕುಸಿತ, ಭೂಕಂಪನ, ಸುನಾಮಿಗಳು, ಸೈಕ್ಲೋನ್‌ಗಳು, ಜಾಗತಿಕವಾಗಿ ಏರುತ್ತಿರುವ ಉಷ್ಣತೆ, ರೋಗ–ರುಜಿನಗಳು, ನಮ್ಮ ಕಣ್ಮುಂದೆ ಉಂಟಾದ ನಿದರ್ಶನಗಳಾಗಿವೆ. ಆದುದರಿಂದ ಅರಣ್ಯ ಪ್ರದೇಶದಲ್ಲಿಯ ಮರ–ಗಿಡಗಳ ರಕ್ಷಣೆ ಸಾಮಾನ್ಯ ಜನರದ್ದೇ ಆಗಬೇಕಿದೆ. ಆಗ ಮಾತ್ರ ಅರಣ್ಯಗಳ ವೃದ್ಧಿಯಾಗಿ ರೈತರಿಗೆ ಎಲ್ಲಾ ರೀತಿಯಲ್ಲಿಯೂ ಸಹಾಯ ಹಸ್ತವನ್ನು ಚಾಚಬಲ್ಲವು.

ಮರಗಳನ್ನು ಅರಣ್ಯ ಪ್ರದೇಶದಲ್ಲಿ ಬೆಳೆಸುವುದರ ಜೊತೆಗೆ ಕೃಷಿ ಭೂಮಿಯ ಬದುಗಳ ಮೇಲೆ, ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಬೆಳೆಯುವುದು, ರೈತರ ಆದಾಯ ಹೆಚ್ಚಿಸಲು ಸಹಕಾರಿಯಾಗುವುದರೊಂದಿಗೆ

– ಮುಂದಿನ ಪುಟಕ್ಕೆ...

# ಕೃಷಿ ಅರಣ್ಯದಲ್ಲಿ ಹಿಪ್ಪುನೇರಳೆ ಮರ (MULBERRY)

ಶ್ರೀ. ದೀಪಕ್ ಶರ್ಮ, ಭಾ.ಅ.ಸೇ.(ನಿ)
ಶ್ರೀ. ಹೆಚ್.ಜಿ. ಶಿವಾನಂದ ಮೂರ್ತಿ,ಭಾ.ಅ.ಸೇ.(ನ)

ಕರ್ನಾಟಕದಲ್ಲಿ ಹಿಪ್ಪುನೇರಳೆ ಬೆಳೆಯುವುದು ಮುಖ್ಯವಾದ ಕೃಷಿ ಚಟುವಟಿಕೆಗಳಲ್ಲೊಂದಾಗಿದೆ ಹಾಗೂ ಉದ್ಯಮವಾಗಿ ಅಭಿವೃದ್ಧಿ ಹೊಂದಿದೆ. ಹಿಪ್ಪುನೇರಳೆ (Morus alba) ಬೆಳೆಯನ್ನೂ ರೈತರು ಜಮೀನುಗಳಲ್ಲಿ ಬೆಳೆದು ಅವುಗಳ ಎಲೆಗಳಿಂದ ರೇಷ್ಮೆ ಹುಳುಗಳನ್ನು ಸಾಕಾಣಿಕೆ ಮಾಡುವರು. ಹಿಪ್ಪು ನೇರಳೆಯು ನೀರು ಮತ್ತು ಗೊಬ್ಬರಕ್ಕೆ ಉತ್ತಮವಾಗಿ ಪ್ರತಿಕ್ರಿಯಿಸುವುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಳೆಯ ಅಭಾವದಿಂದ ಅಂತರ್ಜಲದ ಮಟ್ಟವು ಬಹಳ ಕುಸಿದಿದ್ದು, ರೇಷ್ಮೆ ಬೆಳೆಯ ಉತ್ಪಾದನೆ ಮತ್ತು ಗುಣಮಟ್ಟ ಸಹ ಕುಸಿದಿದೆ. ಅಂತರ್ಜಲದ ಅಭಾವದಿಂದ ಅನೇಕ ರೈತರು ಹಿಪ್ಪುನೇರಳೆ ಬೆಳೆಯುವ ಪ್ರದೇಶವನ್ನು ನೀರಿನ ಲಭ್ಯತೆಗನುಗುಣವಾಗಿ ಕಡಿಮೆ ಮಾಡಿರುವರು. ಈ ಸಮಸ್ಯೆಯನ್ನು ಬಗೆಹರಿಸಲು ಹಲವು ಪ್ರಗತಿಪರ ರೇಷ್ಮೆ ಬೆಳೆಗಾರರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸಣ್ಣ ಗಾತ್ರದ ಹಿಪ್ಪುನೇರಳೆ ಮರವನ್ನು 8ಅಡಿ X 8ಅಡಿ ಅಥವಾ 10ಅಡಿ X 10ಅಡಿ ಅಂತರದಲ್ಲಿ 4ರಿಂದ 5ಅಡಿ ಎತ್ತರಕ್ಕೆ ಮಳೆಯಾಶ್ರಿತ ಹಾಗೂ ನೀರಾವರಿ ಜಮೀನುಗಳಲ್ಲಿ ಬೆಳೆಯುವರು. ಈ ಪದ್ಧತಿಯು ಟ್ರಾಕ್ಟರ್‌ನಿಂದ ಅಂತರ ಬೇಸಾಯಕ್ಕೆ ಮತ್ತು ಹನಿ ನೀರಾವರಿಗೆ ಸೂಕ್ತವೆನಿಸಿದೆ. ಇದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗುವುದಲ್ಲದೆ ಎಲೆಗಳ ಗುಣಮಟ್ಟವು ಸಾಂಪ್ರದಾಯಿಕ ಪದ್ಧತಿಗಿಂತಲೂ ಉತ್ತಮ ಮಟ್ಟದ್ದಾಗಿದೆ.

### ಹಿಪ್ಪುನೇರಳೆ ಮರದ ಲಾಭಗಳು:

1. ಹಿಪ್ಪುನೇರಳೆ ಮರಗಳನ್ನು ಮಳೆಯಾಶ್ರಿತ ಹಾಗೂ ನೀರಾವರಿ ಪ್ರದೇಶಗಳಲ್ಲಿ ಬೆಳೆಯಬಹುದು.

2. ಉತ್ತಮ ಗುಣಮಟ್ಟದ ಎಲೆಗಳನ್ನೂ ಇಳುವರಿ ಕಡಿಮೆಯಾಗದಂತೆ ಪಡೆಯಲು ಸಾಧ್ಯ.

3. ಯಾಂತ್ರಿಕ ಬೇಸಾಯ ಕ್ರಮಗಳನ್ನು ಅನುಸರಿಸಬಹುದು.

4. ಅಂತರ ಬೆಳೆಯಾಗಿ ದ್ವಿದಳ ಧಾನ್ಯಗಳು, ಇತರೆ ಆಹಾರ ಬೆಳೆಗಳು ಹಾಗೂ ಹಸಿರೆಲೆ ಗೊಬ್ಬರದ ಬೆಳೆಯಿಂದ ಆರ್ಥಿಕ ಲಾಭವನ್ನು ಪಡೆಯುವುದರ ಜೊತೆಗೆ ಹಸಿರೆಲೆ ಗೊಬ್ಬರವಾಗಿ ಹಾಗೂ ಮಲ್ಚ್ ಆಗಿ ಉಪಯೋಗಿಸಬಹುದು.

5. ಬೆಳೆಯ ಮಧ್ಯದಲ್ಲಿ ಮಳೆ ನೀರಿನ ಇಂಗು ಗುಂಡಿಗಳನ್ನು ನಿರ್ಮಿಸಿ ಅಂತರ್ಜಲದ ಮಟ್ಟವನ್ನೂ ಸುಧಾರಿಸಲು ಹಾಗೂ ಉಪಯೋಗಕ್ಕೆ ಬಾರದ ಕೃಷಿ ಬೆಳೆಯನ್ನೂ ಹಸಿರೆಲೆ ಗೊಬ್ಬರವನ್ನಾಗಿ ಪುನರ್ ಬಳಕೆ ಮಾಡಲು ಸಾಧ್ಯ. 8ಅಡಿ X 8ಅಡಿಯಲ್ಲಿ ಬೆಳೆದ ಮೂರು ವರ್ಷದ ಹಿಪ್ಪುನೇರಳೆ ಬೆಳೆಯಿಂದ ಸುಮಾರು 25 ಮೆಟ್ರಿಕ್ ಟನ್ ಎಲೆಗಳನ್ನು ಪ್ರತಿ ಎಕರೆಗೆ ಬೆಳೆಯಲು ಸಾಧ್ಯ. ಇದರಿಂದ ಸರಾಸರಿ 1500 ಮೊಟ್ಟೆಗಳನ್ನು ಬೆಳೆದು ವರ್ಷದಲ್ಲಿ 1000 ಕೆ.ಜಿ. ರೇಷ್ಮೆ ಗೂಡುಗಳನ್ನು ಪ್ರತಿ ಎಕರೆಯಿಂದ ಉತ್ಪಾದಿಸಬಹುದು.

ಹಿಪ್ಪುನೇರಳೆ ಮರವು ಬಹುವಾರ್ಷಿಕ ಬೆಳೆ ಮತ್ತು ವಿವಿಧ ಕೃಷಿ ಪ್ರದೇಶಗಳಲ್ಲಿ ಬೆಳೆಯುವ ಬೆಳೆಯಾಗಿದೆ. ಒಮ್ಮೆ ಜಮೀನುಗಳಲ್ಲಿ ಬೆಳೆಯಲು ಪ್ರಾರಂಭಿಸಿದಲ್ಲಿ ಸುಮಾರು 20 ರಿಂದ 25 ವರ್ಷಗಳವರೆಗೆ ಸರಿಯಾದ ನಿರ್ವಹಣೆಯಿಂದ ಉತ್ತಮ ಗುಣಮಟ್ಟದ ಎಲೆಗಳನ್ನೂ ಬ್ರಷ್‌ವುಡ್ ಮಾದರಿಯಲ್ಲಿ ಪಡೆಯಬಹುದು. ಹಿಪ್ಪುನೇರಳೆಯು ಮರವಾಗಿ ಬೆಳೆದರೂ





ಸಹ ಇದನ್ನು ಸರಿಯಾದ ತರಬೇತಿಯಿಂದ ಕಡಿಮೆ ಎತ್ತರದ ಬುಶ್ ಮಾದರಿಯಲ್ಲಿ ಹಾಗೂ ಮರವಾಗಿ ಆರ್ಥಿಕ ಲಾಭವನ್ನು ಪಡೆಯಲು ಸಾಧ್ಯ. ಇದು $20^0$ ಸೆಲ್ಸಿಯಸ್‌ನಿಂದ $30^0$ ಸೆಲ್ಸಿಯಸ್ ಉಷ್ಣತೆಯಲ್ಲಿ ಮತ್ತು ಪ್ರತಿದಿನ 9ರಿಂದ 13 ಗಂಟೆಗಳ ಸೂರ್ಯನ ಬಿಸಿಲಿನಲ್ಲಿ ಚೆನ್ನಾಗಿ ಬೆಳೆಯುವುದು. ಹಿಪ್ಪುನೇರಳೆ ಬೆಳೆಗೆ ಸರಾಸರಿ 60 ಮಿ.ಮೀ ನೀರಿನ ಅವಶ್ಯಕತೆ ಪ್ರತೀ ವಾರಕ್ಕೆ ಬೇಕಾಗುವುದು. ಇಂತಹ ಸನ್ನಿವೇಶಗಳಲ್ಲಿ ದಕ್ಷಿಣ ಭಾರತದ ಹಲವು ಪ್ರಾಂತ್ಯಗಳಲ್ಲಿ ಸರಾಸರಿ 5 ರಿಂದ 6 ಬಾರಿ ರೇಷ್ಮೆ ಬೆಳೆಯನ್ನು ಪಡೆಯಬಹುದು ಹಾಗೂ ಸರಾಸರಿ ರೈತರು ವಾರ್ಷಿಕವಾಗಿ ರೂ 1.5 ರಿಂದ 2ಲಕ್ಷ ಆದಾಯವನ್ನು 10ಅಡಿX10ಅಡಿ ಅಂತರದಲ್ಲಿ ಹಿಪ್ಪುನೇರಳೆ ಬೆಳೆಯನ್ನು ಇತರೆ ಕೃಷಿ ಬೆಳೆಯೊಂದಿಗೆ ಬೆಳೆಯಬಹುದು.

ಹಿಪ್ಪುನೇರಳೆ ಮರವನ್ನು ಕೃಷಿ ಅರಣ್ಯ ಮಾದರಿಯಲ್ಲಿ ವಿವಿಧ ಕೃಷಿ ಪ್ರದೇಶಗಳಲ್ಲಿ ಅದರಲ್ಲೂ ಬರಪೀಡಿತ ಪ್ರದೇಶಗಳಲ್ಲೂ ಬೆಳೆಯಲು ಸೂಕ್ತವಾಗಿದೆ. ರೈತರು ವರ್ಷವಿಡೀ ಆದಾಯವನ್ನು ಪಡೆಯಲು ಸಾಧ್ಯವೆನಿಸುವುದು. ♦

–ಹಿಂದಿನ ಪುಟದಿಂದ...

ಪ್ರಕೃತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ಇಂಗಾಲಾಮ್ಲ ಮತ್ತು ಇತರೆ ಹಸಿರುಮನೆ ಅನಿಲಗಳ ಪ್ರಮಾಣವನ್ನು ತಗ್ಗಿಸುವುದರಿಂದ, ಉಷ್ಣತೆಯನ್ನು ಕಡಿಮೆಗೊಳಿಸಲು ಸಾಧ್ಯವಾಗುವುದು.

ಹಿಂದೆ ಕೃಷಿ ಭೂಮಿಯ ಸುತ್ತ ಸಾಕಷ್ಟು ಪ್ರಮಾಣದಲ್ಲಿ ಗಿಡ–ಮರಗಳಿರುತ್ತಿದ್ದುದರಿಂದ, ಕೃಷಿ ಭೂಮಿಯಲ್ಲಿಯ ತೇವಾಂಶ ಸಂರಕ್ಷಣೆ, ಮಣ್ಣಿನ ಸವಕಳಿ ತಪ್ಪಿಸುವುದು, ಮರಗಳ ಎಲೆಗಳು ಉದುರಿ ಸಾವಯವ ಗೊಬ್ಬರವಾಗಿ ಫಲವತ್ತತೆ ಹೆಚ್ಚುತ್ತಿತ್ತು. ಇಷ್ಟೇ ಅಲ್ಲದೆ ಮರಗಳು ಅನೇಕ ಪ್ರಾಣಿ ಪಕ್ಷಿಗಳು, ಪರೋಪಕಾರಿ ಕೀಟಗಳಿಗೆ ಆಶ್ರಯ ತಾಣವಾಗಿರುವುದರಿಂದ ಕೃಷಿ ಬೆಳೆಯ ಕೀಟಗಳಿಗೆ ಮತ್ತು ರೋಗಗಳನ್ನು ಜೈವಿಕವಾಗಿ ನಿಯಂತ್ರಿಸಿ, ರೈತರ ಉತ್ಪಾದನಾ ವೆಚ್ಚವನ್ನು ಕಡಿಮೆ ಗೊಳಿಸುತ್ತಿದ್ದವು. ಇಂದು ಕೀಟನಾಶಕಗಳ ಬಳಕೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ತಪ್ಪಿಸಲು ಸಾಧ್ಯವಾಗಿತ್ತು.

ಮರಗಳು ರೈತನ ಮಿತ್ರನಾಗಿ, ಖರ್ಚು ವೆಚ್ಚವನ್ನು ಕಡಿಮೆ ಗೊಳಿಸುವುದಲ್ಲದೇ, ರೈತರ ಆದಾಯವನ್ನು ಹೆಚ್ಚಿಸುವುದರೊಂದಿಗೆ ಪರಿಸರ ಸಮತೋಲನವನ್ನು ಸರಿಪಡಿಸುವ ಸಾಧನವಾಗಿವೆ.

ವೃಕ್ಷೋ ರಕ್ಷತಿ ರಕ್ಷಿತಃ ♦

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯಿಂದ ನಡೆದ ಕಾರ್ಯಕ್ರಮಗಳ ಬಗ್ಗೆ (ಜೂನ್– 2019 ರಿಂದ ಸೆಪ್ಟೆಂಬರ್ 2019) ವರದಿ

✍ ಎ.ಎಂ. ಅಣ್ಣಯ್ಯ, ಕಾರ್ಯದರ್ಶಿ
ಕೃಷಿ–ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು ದೂ: 9448019306

**1.** ದಿನಾಂಕ: 08.06.2019ರಂದು ಹಾಸನ ಜಿಲ್ಲೆಯ ಹಳೆಬೀಡುವಿನಲ್ಲಿ ನಡೆದ ರಾಜ್ಯಮಟ್ಟದ ಪರಿಸರ ಸಮ್ಮೇಳನದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳು ಭಾಗವಹಿಸಿ ಕೃಷಿ–ಅರಣ್ಯ ಹಾಗೂ ಹವಾಮಾನ ವೈಪರೀತ್ಯ ಬಗ್ಗೆ ಮಾತನಾಡಿ ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ.

**2.** ದಿನಾಂಕ: 10.06.2019ರಂದು ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.

**3.** ದಿನಾಂಕ: 22.07.2019ರಂದು **"ಕಾವೇರಿ ನದಿ ಪುನಶ್ಚೇತನ"** ಬಗ್ಗೆ **ಈಶ ಫೌಂಡೇಶನ್** ಕೊಯಮತ್ತೂರು ಇವರೊಡನೆ ಸಂಸ್ಥೆಯ ಕಛೇರಿಯಲ್ಲಿ ಶ್ರೀ ದೀಪಕ್ ಶರ್ಮಾ ಅವರ ಅಧ್ಯಕ್ಷತೆಯಲ್ಲಿ ಕಾವೇರಿ ಜಲಾನಯನ ಪ್ರದೇಶ ಹಾಗೂ ಅಚ್ಚುಕಟ್ಟು ಪ್ರದೇಶಗಳಲ್ಲಿ ಮರಗಿಡಗಳನ್ನು ನೆಟ್ಟು ಕೃಷಿ–ಅರಣ್ಯ ಅಭಿವೃದ್ಧಿ ಪಡಿಸಿ ಕಾವೇರಿ ನದಿಯು ನಿರಂತರವಾಗಿ ಹರಿಯುವಂತೆ ಹಾಗೂ ರೈತರು ಬರ–ನೆರೆ ಸಂಕಷ್ಟಗಳಲ್ಲಿಯೂ ಆರ್ಥಿಕವಾಗಿ ನೆಮ್ಮದಿಯಿಂದ ಇರುವಂತೆ ಕಾರ್ಯಕ್ರಮ ರೂಪಿಸಲು ಚರ್ಚಿಸಲಾಯಿತು.

**4.** ದಿನಾಂಕ:30.07.2019ರಂದು ನಮ್ಮ ಸಂಸ್ಥೆ ಹಾಗೂ **ಮಂಡ್ಯ ಜಿಲ್ಲಾ ಕೃಷಿ ವಿಜ್ಞಾನ ಪದವೀಧರರ ಸಂಘ**ದ ವತಿಯಿಂದ ಮಂಡ್ಯ ಬಳಿ ಕೃಷಿ–ಅರಣ್ಯ ಪ್ರಾತ್ಯಕ್ಷಿಕ ಕ್ಷೇತ್ರಗಳಿಗೆ ಸುಮಾರು 60 ಮಂದಿ **ಈಶ ಫೌಂಡೇಶನ್ ಸದಸ್ಯರು,** ಸ್ಥಳೀಯರು ವಿವಿಧ ತಾಕುಗಳಿಗೆ ಭೇಟಿ ನೀಡಿ ರೈತರೊಡನೆ ವಿಚಾರ ವಿನಿಮಯ ಮಾಡಿದರು. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಸಂಶೋಧನ ನಿರ್ದೇಶಕರಾದ **ಡಾ. ಎಂ.ಎ. ಶಂಕರ್** ಹಾಗೂ ಸಂಸ್ಥೆಯ ಕಾರ್ಯದರ್ಶಿ **ಶ್ರೀ. ಎ.ಎಂ.ಅಣ್ಣಯ್ಯ** ಇವರ ನೇತೃತ್ವದಲ್ಲಿ ಕ್ಷೇತ್ರ ಭೇಟಿ ಯಶಸ್ವಿಯಾಗಿ ನಡೆಯಿತು. ಕೃಷಿ–ಅರಣ್ಯದಲ್ಲಿ **ತೇಗ, ಹೆಬ್ಬೇವು, ಗೇರು, ತೆಂಗು, ಪಪ್ಪಾಯ, ನುಗ್ಗೆ** ಇತ್ಯಾದಿ ಹಾಗೂ ಕೃಷಿ ಅಂತರ ಬೆಳೆಗಳನ್ನು ವೀಕ್ಷಿಸಲಾಯಿತು. ಬೆಳಿಗ್ಗೆ **ಈಶ ಫೌಂಡೇಶನ್** ಅವರಿಗೆ ಮಂಡ್ಯ **ಕೃಷಿಕ್ ಸರ್ವೋದಯ ಟ್ರಸ್ಟ್‌ನಲ್ಲಿ** ಕಾವೇರಿ ಜಲಾನಯನ ಮತ್ತು ಅಚ್ಚುಕಟ್ಟು ಪ್ರದೇಶಗಳಲ್ಲಿ ಕೃಷಿ–ಅರಣ್ಯದ ಬಗ್ಗೆ ಪಿಪಿಟಿ ಮೂಲಕ ಉಪನ್ಯಾಸ ನೀಡಲಾಯಿತು ಹಾಗೂ ಚರ್ಚಾಗೋಷ್ಠಿ ನಡೆಸಲಾಯಿತು.

**5.** ದಿನಾಂಕ: 31.07.2019ರಂದು ಮಂಡ್ಯದ **ವಿ.ಸಿ.ಫಾರಂನಲ್ಲಿ** ನಡೆದ **ಕೃಷಿ ಇನ್‌ಪುಟ್ಸ್ ಮಾರುಕಟ್ಟೆ**ದಾರರಿಗೆ **'ದೇಶಿ'** ಕಾರ್ಯಕ್ರಮದಡಿ ಸಂಸ್ಥೆಯ ಕಾರ್ಯದರ್ಶಿಯವರು ಕೃಷಿ–ಅರಣ್ಯದ ಬಗ್ಗೆ ಪಿಪಿಟಿ ಮೂಲಕ ಉಪನ್ಯಾಸ ನೀಡಿ ರೈತರ **'ಆಗುಹೋಗು'**ವಿನ ಬಗ್ಗೆ ವಿಚಾರ ವಿನಿಮಯ ಮಾಡಿದರು.

**6.** ದಿನಾಂಕ: 22.08.2019ರಂದು ಸಂಸ್ಥೆಯ **ಕಾರ್ಯಕಾರಿ ಸಮಿತಿ ಸಭೆಯನ್ನು** ಮಾಗಡಿ ತಾಲೂಕು ಸೋಲೂರು ಹೋಬಳಿ **ಕಲ್ಯಾಣಪುರ ಗ್ರಾಮದ ಶ್ರೀ. ಗುರುಮೂರ್ತಿಯವರ ಕೃಷಿ–ಅರಣ್ಯ ಕ್ಷೇತ್ರದಲ್ಲಿ** ನಡೆಸಲಾಯಿತು.

**7.** ದಿನಾಂಕ: 22.08.2019 ರಂದು ಮಾಗಡಿ ತಾಲೂಕು, ಸೋಲೂರು ಹೋಬಳಿ, **ಕಲ್ಯಾಣಪುರ** ಗ್ರಾಮದಲ್ಲಿ **ಕೃಷಿ ಅರಣ್ಯ ಸಂಸ್ಥೆಯ** ಸದಸ್ಯರಾದ **ಶ್ರೀ ಗುರುಮೂರ್ತಿಯವರು** 25 ವರ್ಷಗಳಿಂದ ನಿರ್ಮಿಸಿರುವ ಕೃಷಿ–ಅರಣ್ಯ, ಮಣ್ಣು ಮತ್ತು ನೀರು ಸಂರಕ್ಷಣಾ ಕಾರ್ಯಕ್ರಮಗಳಿಗೆ ಎಲ್ಲಾ ಸದಸ್ಯರು ಭೇಟಿ ನೀಡಿ ಅಧ್ಯಯನ ಮಾಡಿದರು. ಕ್ಷೇತ್ರದಲ್ಲಿ **ತೇಗ, ಸಿಲ್ವರ್‌ಓಕ್, ಮಾವು, ಹಲಸು, ತೆಂಗು,** ಹೀಗೆ ವಿವಿಧ ಅರಣ್ಯ ತೋಟಗಾರಿಕೆ ಮರಗಳು ಉತ್ತಮವಾಗಿ ಬೆಳೆದಿವೆ. ಅರ್ಕಾವತಿ ಜಲಾನಯನ ಪ್ರದೇಶವಾದ ಇಲ್ಲಿ ಹರಿಯುವ ನೀರನ್ನು ಇಂಗಿಸಿ ಕೊಳವೆ ಬಾವಿಗಳಿಗೆ ಜಲ ಪೂರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗಲ್ಲಿ ತಡೆ, ಕೃಷಿ ಹೊಂಡ, ಜೇನು ಸಾಕಾಣಿಕೆ ಅದ್ಭುತವಾಗಿವೆ.



**ಜೇನು ತಜ್ಞ ಶ್ರೀ ಶಾಂತವೀರಯ್ಯನವರು** ಗುರುಮೂರ್ತಿಯವರ ತೋಟದಲ್ಲಿ ಜೇನು ಪೆಟ್ಟಿಗೆಗಳನ್ನು ಅಳವಡಿಸುವ ವಿಧಾನ, ಜೇನು ತೆಗೆಯುವ ರೀತಿ–ನೀತಿಗಳನ್ನು ಪ್ರಾಯೋಗಿಕವಾಗಿ ತೋರಿಸಿ ಸದಸ್ಯರಿಗೆ ಮನಮುಟ್ಟುವಂತೆ ಪ್ರಾತ್ಯಕ್ಷಿಕೆ ಮಾಡಿದರು.

**8.** ದಿನಾಂಕ:27.08.2019ರಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ನೆಲಮಂಗಲ ತಾಲೂಕು **ಬಳ್ಳಗೆರೆ** ಗ್ರಾಮದಲ್ಲಿ ಹಮ್ಮಿಕೊಂಡಿರುವ RAWE ಕಾರ್ಯಕ್ರಮದಲ್ಲಿ **ಅಧ್ಯಕ್ಷರಾದ ಶ್ರೀ. ದೀಪಕ್ ಶರ್ಮ, ಕಾರ್ಯದರ್ಶಿ ಶ್ರೀ. ಎ.ಎಂ.ಅಣ್ಣಯ್ಯ** ಹಾಗೂ ಜಂಟಿ ಕಾರ್ಯದರ್ಶಿಗಳಾದ **ಡಾ.ಎಂ. ಮಹದೇವಮೂರ್ತಿ,** ಖಜಾಂಚಿಯವರಾದ **ಶ್ರೀ. ಕೆ.ಎಸ್.ಆನಂದ** ಇವರುಗಳು ಭಾಗವಹಿಸಿ ಗಿಡಗಳನ್ನು ನೆಟ್ಟು ಮತ್ತು ವಿತರಿಸಿ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮಸ್ಥರಿಗೆ ಕೃಷಿ–ಅರಣ್ಯ, ಹವಾಮಾನ ವೈಪರೀತ್ಯದ ಬಗ್ಗೆ ಮಾಹಿತಿ ನೀಡಿದರು.

**9.** ದಿನಾಂಕ: 08.09.2019ರಂದು ಬೆಂಗಳೂರಿನ ಅರಮನೆ ಆವರಣದಲ್ಲಿ ಈಶ ಫೌಂಡೇಶನ್ ಅವರಿಂದ ಕಾವೇರಿ ನದಿ ಪುನಶ್ಚೇತನದ (ಕಾವೇರಿ ಕೂಗು) ಬಗ್ಗೆ ನಡೆದ ಬೃಹತ್ ಸಮಾವೇಶದಲ್ಲಿ ಕರ್ನಾಟಕ ಅರಣ್ಯ ಇಲಾಖೆ ಅಧಿಕಾರಿಗಳೊಡನೆ ಸಂಸ್ಥೆಯ ಕಾರ್ಯದರ್ಶಿಗಳು ಭಾಗವಹಿಸಿದರು. ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು** ಈ ವರ್ಷ ಎರಡು ಕೋಟಿ ಸಸಿಗಳು ಅರಣ್ಯ ಇಲಾಖೆಯಲ್ಲಿ ಲಭ್ಯವಿದ್ದು ಅವುಗಳನ್ನು ಉಪಯೋಗಿಸಲು ತಿಳಿಸಿದರು. ಇದಕ್ಕೆ ಸಮಾವೇಶದಲ್ಲಿ ಭಾಗವಹಿಸಿದ್ದ **ಸದ್ಗುರು ಜಗ್ಗಿ ವಾಸುದೇವ್** ಅವರು ಅಭಿನಂದನೆ ಸಲ್ಲಿಸಿ, ಕೃಷಿ–ಅರಣ್ಯ ಆಂದೋಲನದಲ್ಲಿ ಸರ್ವರೂ ಭಾಗವಹಿಸಿ ಗಿಡಮರಗಳನ್ನು ನೆಡಲು ಕೋರಿದರು ◆

# ಸಾಮಾಜಿಕ ಹಾಗೂ ಪರಿಸರ ನೆಲೆಯಲ್ಲಿ "ಅರಳೀಕಟ್ಟೆ"ಯ ಕಲ್ಪನೆ

ಎಸ್. ನಾರಾಯಣಸ್ವಾಮಿ, ಸದಸ್ಯರು
ಕೃಷಿ–ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರು. ದೂ: 9880042155
ಕನ್ನಡಕ್ಕೆ: ಶ್ರೀ. ಹೆಚ್.ಜಿ.ಶಿವಾನಂದಮೂರ್ತಿ, ಭಾ.ಅ.ಸೇ(ನ), ದೂ:9448126246



ಅರಳೀ ಮರ ಹಾಗೂ ಬೇವಿನ ಮರಗಳನ್ನು ಊರ ಮುಂದಿನ ಜಾಗಗಳಲ್ಲಿ ಒಟ್ಟಿಗೇ ಬೆಳೆಯುವ ಪದ್ಧತಿ ಬಹಳ ಕಾಲದಿಂದಲೂ ನಡೆದು ಬಂದಿದೆ. ಸಾಮಾನ್ಯವಾಗಿ ಪ್ರತೀ ಗ್ರಾಮಗಳಲ್ಲೂ ಒಂದು ಅಥವಾ ಹೆಚ್ಚಿಗೆ **ಅರಳೀಕಟ್ಟೆ (ಅಶ್ವತ್ಥಕಟ್ಟೆ)**ಗಳಿರುತ್ತವೆ. ಗ್ರಾಮದ ಜನರು **ಅರಳೀ ಮರ** ಹಾಗೂ **ಬೇವಿನ ಮರ**ಗಳನ್ನು ಒಟ್ಟಿಗೇ ಬೆಳೆದು ಅದರ ಸುತ್ತಲೂ ಕಟ್ಟೆಯನ್ನು (ಫ್ಲಾಟ್ ಫಾರಂ) ಕಟ್ಟುವರು ಹಾಗೂ ಗ್ರಾಮದ ಜನರು ಸೇರುವ ಒಂದು ಸ್ಥಳವಾಗಿದೆ. ಇದನ್ನು ಸೋಮಾರಿ ಕಟ್ಟೆಯೆಂದು ಸಹ ಕರೆಯುತ್ತಾರೆ.

ಅರಳೀಕಟ್ಟೆಯ ಕಲ್ಪನೆ ಬಹಳ ಹಿಂದಿನ ಕಾಲದ್ದು, ನಮ್ಮ ದೇಶದ ವೇದ, ಉಪನಿಷದ್, ಮನುಸ್ಮೃತಿ ಮತ್ತು ಚರಕ ಸಂಹಿತೆಯಲ್ಲೂ ಸಹ ಉಲ್ಲೇಖಿಸಲಾಗಿದೆ. ಬೌದ್ಧ ಧರ್ಮ ಗ್ರಂಥಗಳಲ್ಲಿ **ಅಶ್ವತ್ಥ ಕಟ್ಟೆ**ಯ ಬಗ್ಗೆ ಸುಧೀರ್ಘವಾಗಿ ವರ್ಣಿಸಲಾಗಿದೆ. ರಾಜನಾಗಿದ್ದ **ಸಿದ್ಧಾರ್ಥ**ನಿಗೆ **ಅರಳೀ ಮರ**ದ ಕೆಳಗೆ ತಪಸ್ಸು ಮಾಡಿ ಜ್ಞಾನೋದಯವಾಗಿರುವುದು ನಿದರ್ಶನ. ಇದನ್ನು **ಬೋದಿವೃಕ್ಷ**ವೆಂದು ಸಹ ಕರೆಯುವರು. ಈ ವೃಕ್ಷದ ಅಡಿಯಲ್ಲಿ ಜ್ಞಾನೋದಯವಾದ **ಸಿದ್ಧಾರ್ಥ** **"ಬುದ್ಧ"**ನಾಗಿ ಪ್ರಖ್ಯಾತಿ ಪಡೆದ. ಈ ಮರದ ಒಂದು ರೆಂಬೆ ಈಗಲೂ ಸಹ ಶ್ರೀಲಂಕಾದ ಅನುರಾಧಪುರದಲ್ಲಿದೆ.

ಕ್ರಿ.ಪೂ.3ನೇ ಶತಮಾನದಲ್ಲಿ ಬೌದ್ಧ ಧರ್ಮದ ಅನುಯಾಯಿಗಳು, ಅದರಲ್ಲೂ **ಸಾಮ್ರಾಟ್ ಅಶೋಕ ಚಕ್ರವರ್ತಿಯು** ಅರಳೀ ವೃಕ್ಷಕ್ಕೆ ರಾಷ್ಟ್ರೀಯ ವೃಕ್ಷದ ಸ್ಥಾನ–ಮಾನವನ್ನು ನೀಡಿ, ಬುದ್ಧನ ತತ್ವಗಳ ಸಂದೇಶವನ್ನು ಸಾರುವ ಉದ್ದೇಶದಿಂದ **ಅಶ್ವತ್ಥವೃಕ್ಷ**ಗಳನ್ನು ಸಾಲು ಮರಗಳನ್ನಾಗಿ, ದೇವಸ್ಥಾನದ ಮರಗಳಾಗಿ ಹಾಗೂ ಜನಸಾಮಾನ್ಯರ ಒಳಿತಿಗಾಗಿ ಬೆಳೆಸಿರುವುದು ಉಲ್ಲೇಖಾರ್ಹ. ಅಶ್ವತ್ಥ ಮರವು ಬೃಹದಾಕಾರವಾಗಿ ಬೆಳೆಯುವುದರಿಂದ, ಸಾಕಷ್ಟು ಸ್ಥಳಾವಕಾಶವಿರುವ ಜಾಗಗಳಲ್ಲಿ ಬೆಳೆಯುವರು. ಈ ಮರಕ್ಕೆ ಹಿಂದೂ ಧರ್ಮದಲ್ಲಿ ಬಹಳವಾದ ಪಾವಿತ್ರತೆಯನ್ನು ಹಾಗೂ ಗೌರವದ ಸ್ಥಾನಮಾನವನ್ನು ನೀಡಲಾಗಿದೆ. ಹಿಂದಿನ ಕಾಲದಲ್ಲಿ ಅರಳೀ ಮರವನ್ನು ನಾಟಿ ಮಾಡಿದಾಗ ಸುತ್ತಲೂ ಬೇಲಿಗಾಗಿ ಹಲವಾರು ಮುಳ್ಳಿನ ಜಾತಿಯ ಗಿಡಗಳನ್ನು ನೆಟ್ಟು ರಕ್ಷಣೆ ಮಾಡಲಾಗುತ್ತಿತ್ತು. ನಂತರದ ದಿನಗಳಲ್ಲಿ ಗ್ರಾಮಗಳ ಮಧ್ಯೆ, ದೇವಸ್ಥಾನಗಳ ಆಜು–ಬಾಜು, ಬಸ್‌ಗಳ ತಂಗುದಾಣಗಳಲ್ಲಿ ಬೆಳೆದ ಮರಗಳ ಸುತ್ತಾ ಕಲ್ಲಿನ ಕಟ್ಟೆಯನ್ನು ಕಟ್ಟಿ, ಮೇಲ್ಭಾಗದಲ್ಲಿ ಹಾಸುಗಲ್ಲುಗಳನ್ನು ಹಾಕುತ್ತಿದ್ದುದರಿಂದ, ಗ್ರಾಮದ ಜನರು ಬಂದು ಸೇರುವ ಸಾರ್ವಜನಿಕ ಸ್ಥಳವಾಗಿ ಪರಿವರ್ತನೆಯಾಯಿತು. ಕಾಲ ಕಳೆದಂತೆ ಅರಳೀ ಮರದ ಜೊತೆಗೆ ಬೇವಿನ ಮರವನ್ನು ನೆಡುವ ಪದ್ಧತಿ ಪ್ರಾರಂಭವಾಗಿ, ಅರಳೀ ಮರಕ್ಕೆ ಗಂಡೆಂದು ಹಾಗೂ ಬೇವಿನ ಮರಕ್ಕೆ ಹೆಣ್ಣೆಂದು ಪೂಜನೀಯ ಸ್ಥಾನವನ್ನು ಪಡೆದುಕೊಂಡಿತು. ಬೇವಿನ ಮರ ಬಹು ಉಪಯೋಗಿ ಔಷಧಿಯ ಸಸ್ಯ ಅದೇ ರೀತಿಯಲ್ಲಿ ಅರಳೀ ಮರದ ಎಲೆಗಳೂ ಸಹ ಜಾನುವಾರುಗಳಿಗೆ ಒಳ್ಳೆಯ ಆಹಾರವೆಂದು ಪರಿಗಣಿಸಲಾಯಿತು. ತದ ನಂತರದ ದಿನಗಳಲ್ಲಿ ಅರಳೀ ಕಟ್ಟೆಯು ಮೇಲ್ಭಾಗ ನಾಗದೇವತೆಗಳ ಸ್ಥಾಪನೆ, ನವಗ್ರಹಗಳ ಸ್ಥಾಪನೆ, ವೀರಕಲ್ಲುಗಳು ಮತ್ತು ಮಾಸ್ತಿಕಲ್ಲುಗಳನ್ನು ಸ್ಥಾಪಿಸಿ, ಈ ಕಟ್ಟೆಗೆ ದೇವಸ್ಥಾನದ ಪಾವಿತ್ರತೆಯನ್ನು ನೀಡಲಾಯಿತು. ಈಗಲೂ ಸಹ ಅರಳೀ ಕಟ್ಟೆಯನ್ನು ಪಾವಿತ್ರ್ಯ ಮನೋಭಾವನೆಯಿಂದ ಪೂಜಿಸುವರು. ಮಕ್ಕಳಿಲ್ಲದ ದಂಪತಿಗಳು ಮಕ್ಕಳನ್ನು ಪಡೆಯಲು ಬೆಳಗಿನ ಜಾವದಲ್ಲಿ ಅಶ್ವತ್ಥ ಕಟ್ಟೆಯ ಪ್ರದಕ್ಷಿಣೆಯನ್ನು ಭಕ್ತಿಭಾವದಿಂದ ಮಾಡುವುದರಿಂದ ಮಕ್ಕಳನ್ನು ಪಡೆಯಲು ಸಹ ಸಾಧ್ಯವೆಂದು ಕಂಡುಕೊಂಡರು.

ಹಿಂದೂ ಧರ್ಮದ; ಮದುವೆಯಾಗದ ಹೆಣ್ಣು ಮತ್ತು ಗಂಡು ಮಕ್ಕಳು ಸಹ ಸರಿಯಾದ ಜೋಡಿ ಸಿಗಲೆಂದು ಅರಳೀ ಮರವನ್ನು ಪೂಜಿಸುವ ಸಂಪ್ರದಾಯ ಪ್ರಾರಂಭವಾಯಿತು. ಇದಕ್ಕೆ ಸಾಕ್ಷಿಯೆನ್ನುವಂತೆ ಪ್ರಖ್ಯಾತ **"ವಿದುರಾಶ್ವತ್ಥ"**ದಲ್ಲಿಯ ದೊಡ್ಡ ಗಾತ್ರದ ಅರಳೀ ಮರವನ್ನು ನೋಡಬಹುದು. ಇಲ್ಲಿಗೂ ಸಹ ಬಹಳ ಭಕ್ತಾದಿಗಳು ಮದುವೆಯಾಗುವಂತೆ ಮತ್ತು ಮಕ್ಕಳಿಲ್ಲದವರು ಮಕ್ಕಳಾಗುವಂತೆ ಭೇಟಿ ನೀಡಿ ಭಕ್ತಿಯಿಂದ ಪೂಜಿಸುವುದು ಬಹಳ ದಿನಗಳಿಂದ ನಡೆದು ಬಂದಿದೆ. ಧಾರ್ಮಿಕವಾಗಿ ಅರಳೀ ಮರವನ್ನು ಗಂಡೆಂದು ಬೇವಿನ ಮರವನ್ನು ಹೆಣ್ಣೆಂದು, ಕೆಲವರು ಮಕ್ಕಳ ಮದುವೆಯ ಸಂದರ್ಭದಲ್ಲಿ ಅರಳೀ ಮತ್ತು ಬೇವಿನ ಮರಕ್ಕೆ ಮದುವೆಯನ್ನು ಮಾಡುವರು.

ಅಶ್ವತ್ಥ ಕಟ್ಟೆಗಳನ್ನು ಸಾಮಾನ್ಯವಾಗಿ ಗ್ರಾಮಗಳ ಮಧ್ಯದಲ್ಲಿ, ದೇವಸ್ಥಾನಗಳ ಸಮೀಪ, ರಸ್ತೆಗಳು ಕೂಡುವ ಸ್ಥಳಗಳಲ್ಲಿ ಬೆಳೆಸುವರು. ಬೆಂಗಳೂರು ನಗರದಲ್ಲಿಯೂ ಸಹ 1000ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಅಶ್ವತ್ಥ ಕಟ್ಟೆಗಳನ್ನು ಕಾಣಬಹುದು. ಇದನ್ನು ಗಮನಿಸಿದಾಗ ಗ್ರಾಮೀಣ ಭಾಗದಲ್ಲಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಅರಳೀ ಮರಗಳನ್ನು ಬೆಳೆಸುವ ಪ್ರಾಮುಖ್ಯತೆ ಎದ್ದು ಕಾಣುತ್ತದೆ. **ಅರಳೀ ಮರದ ಮಹತ್ವವನ್ನು ಎರಡು ಪ್ರಮುಖ ದೃಷ್ಟಿಕೋನದಿಂದ ನೋಡಬಹುದು.**

**1) ಸಾಮಾಜಿಕ ಮತ್ತು ಧಾರ್ಮಿಕ ನೆಲೆಯಲ್ಲಿ**

- ಅ) ಗ್ರಾಮದಲ್ಲಿ ನಡೆಯುವ ಸಭೆಗಳು ನಡೆಯುವ ಸ್ಥಳ
- ಆ) ಪ್ರವಾಸಿಗರಿಗೆ ಹಾಗೂ ರೈತರಿಗೆ ವಿಶ್ರಾಂತಿಯ ಸ್ಥಳ
- ಇ) ಗ್ರಾಮಗಳಲ್ಲಿ ಮನೋರಂಜನಾ ಕಾರ್ಯಕ್ರಮಗಳು ನಡೆಯುವ ಸ್ಥಳ
- ಈ) ಹೆಣ್ಣು ಮಕ್ಕಳ ಪ್ರಾರ್ಥನಾ ಸ್ಥಳ
- ಉ) ಗ್ರಾಮ ಮತ್ತು ಪಟ್ಟಣಗಳಲ್ಲಿಯ ನಿರಾಶ್ರಿತರಿಗೆ, ಸನ್ಯಾಸಿಗಳಿಗೆ, ಯೋಗಿಗಳ ಆಶ್ರಯ ತಾಣ

**2. ಪರಿಸರ ಸುಧಾರಿಸುವ ನಿಟ್ಟಿನಲ್ಲಿ**

ಅರಳೀ ಮರಗಳ ಕೆಳಭಾಗದಲ್ಲಿಯ ಪರಿಸರ ಸುತ್ತಲಿನ ಪರಿಸರಕ್ಕಿಂತ

– 9 ನೇ ಪುಟಕ್ಕೆ...

# ವಿದ್ಯಾರ್ಥಿಗಳ ಗ್ರಾಮೀಣ ಉದ್ಯಮಶೀಲತೆ ಜಾಗೃತಿ ಅಭಿವೃದ್ಧಿ ಯೋಜನೆ

## (Students Rural Entrepreneurship Awareness Development Yojana)

ಡಾ. ಕೆ.ಪಿ. ರಘುಪ್ರಸಾದ್, ಡಾ. ಕೃಷ್ಣಮೂರ್ತಿ ಮತ್ತು ಡಾ.ಎಂ. ಮಹದೇವಮೂರ್ತಿ
ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು

ವಿದ್ಯಾರ್ಥಿಗಳ ಗ್ರಾಮೀಣ ಉದ್ಯಮಶೀಲತೆ ಜಾಗೃತಿ ಅಭಿವೃದ್ಧಿ ಯೋಜನೆ (Student READY) ಕಾರ್ಯಕ್ರಮದ ಮುಖ್ಯ ಗುರಿಗಳೆಂದರೆ: ಉದ್ಯಮಶೀಲತೆಯ ಬಗ್ಗೆ ಅರಿವು ಮೂಡಿಸುವುದು, ಗ್ರಾಮೀಣ ಕೃಷಿಯಲ್ಲಿ ನಿಜ ಜೀವನದ ಪ್ರಾಯೋಗಿಕ ಅನುಭವಗಳು ಮತ್ತು ಪ್ರಾಯೋಗಿಕ ಕೃಷಿ ಮತ್ತು ಸಂಯೋಜಿತ ವಿಜ್ಞಾನಗಳ ಬಗ್ಗೆ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ವಿಶ್ವಾಸ, ಕೌಶಲ್ಯ ಮತ್ತು ಸ್ಥಳೀಯ ತಾಂತ್ರಿಕ ಜ್ಞಾನ ಪಡೆದುಕೊಳ್ಳುವಲ್ಲಿ ಹಾಗೂ ವಿದ್ಯಾರ್ಥಿಗಳು ಸ್ವಯಂ ಉದ್ಯೋಗಕ್ಕೆ ತಯಾರಿ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಇದಲ್ಲದೆ ಪ್ರಾಯೋಗಿಕ ಅನುಭವ ಮತ್ತು ಕೈಗಾರಿಕಾ ಕೌಶಲ್ಯಗಳನ್ನು ಕೈಗೆತ್ತಿಕೊಳ್ಳುವಲ್ಲಿ ಅವಕಾಶಗಳನ್ನು ಒದಗಿಸುವುದು ಇದರ ಗುರಿಯಾಗಿದೆ. ಹೊಸ ದಿಗ್ದರ್ಶನ ನೀಡಿ ಪದವೀಧರರು ಮತ್ತು ಇತರೆ ವಿಷಯಗಳಲ್ಲಿ ಉದ್ಯೋಗಾವಕಾಶವನ್ನು ಖಾತ್ರಿ ಪಡಿಸುವುದು ಮತ್ತು ಭರವಸೆ ಮೂಡಿಸುವುದು ಮತ್ತು ಉದ್ಯಮಿಗಳನ್ನು ತೀವ್ರತೆಯ ಜ್ಞಾನಾರ್ಜನೆ ಕೃಷಿಗಾಗಿ ಸಿದ್ದಗೊಳಿಸುವುದು, ಇದಕ್ಕಾಗಿ ಕೃಷಿ ಪದವಿ ಪಡೆಯಲು, ಪ್ರಾಯೋಗಿಕ ಅನುಭವ ಖಾತ್ರಿಪಡಿಸಲು ಮತ್ತು ಪ್ರಾಯೋಗಿಕ ತರಬೇತಿ ಪಡೆಯಲು ಈ ಕಾರ್ಯಕ್ರಮವನ್ನು ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಜಾರಿಗೆ ತರುವುದು ಅವಶ್ಯಕ.

ಐದನೇ ಡೀನ್‌ಗಳ ಕಮಿಟಿಯ ಕೃಷಿ ಮತ್ತು ಸಂಯೋಜಿತ ವಿಜ್ಞಾನಗಳಲ್ಲಿ **Student READY** ಕಾರ್ಯಕ್ರಮದ ಸಂಪೂರ್ಣ ಪಠ್ಯಕ್ರಮವನ್ನು ಒದಗಿಸಿದೆ. ಪುನರ್‌ರಚಿಸಿದ ಪಠ್ಯಕ್ರಮದಿಂದ ಅತ್ಯವಶ್ಯಕ ಕೌಶಲ್ಯಗಳನ್ನು ಮತ್ತು ಉದ್ಯಮಶೀಲತಾ ಚಿಂತನ ಮಾರ್ಗಗಳನ್ನು ಪದವೀಧರರಲ್ಲಿ ಬೆಳೆಸುವುದರಿಂದ ಸ್ವ–ಉದ್ಯಮಗಳತ್ತ ಒಲವು ಮೂಡಿಸುವುದು, ವರ್ಧಿತ ಗ್ರಾಮೀಣ ಜೀವನೋಪಾಯ ಮತ್ತು ಆಹಾರ ಭದ್ರತೆಗೆ ಕೊಡುಗೆ ನೀಡುವುದು, ಕೃಷಿಯ ಸುಸ್ಥಿರತೆ ಮತ್ತು ಕೃಷಿಯ ರೂಪಾಂತರಕ್ಕಾಗಿ ಮಾರ್ಗ ತೋರಿಸುತ್ತದೆ.

ಒಂದು ವರ್ಷದ **Student READY** ಕಾರ್ಯಕ್ರಮವನ್ನು ನಡೆಸಲು ಈ ಕೆಳಗಿನ ಅಂಶಗಳನ್ನು ಪ್ರಸ್ತಾಪಿಸಲಾಗಿದೆ:

1. ವ್ಯವಹಾರ ಮಾದರಿಗಳ ಬಗ್ಗೆ ಪ್ರಾಯೋಗಿಕ ಕಲಿಕೆ.
2. ಕೌಶಲ್ಯ ಅಭಿವೃದ್ಧಿಗಳ ಬಗ್ಗೆ ಪ್ರಾಯೋಗಿಕ ಕಲಿಕೆ.
3. ಗ್ರಾಮೀಣ ಜಾಗೃತಿ ಕಾರ್ಯಾನುಭವ ಕಾರ್ಯಕ್ರಮ (RAWEP)
4. ಇಂಟರ್ನ್‌ಶಿಪ್/ಅಂತರ್ನಿರ್ಮಿತ ತರಬೇತಿ/ಕೈಗಾರಿಕಾ ಬಾಂಧವ್ಯ.
5. ವಿದ್ಯಾರ್ಥಿ ಯೋಜನೆಗಳು.

ಮೇಲ್ಕಂಡ 5 ಅಂಶಗಳಲ್ಲಿ ವಿದ್ಯಾರ್ಥಿಗಳು ಕನಿಷ್ಠ 3 ಅಂಶಗಳನ್ನಾದರೂ ಹೊಂದಿರಬೇಕು.

ಅನುಭವದ ಕಲಿಕೆಯು ವಿದ್ಯಾರ್ಥಿಗಳ ಗುಣಮಟ್ಟ ವೃತ್ತಿಯ ಸಾಮರ್ಥ್ಯ, ಕೌಶಲ್ಯ ಅಭಿವೃದ್ಧಿ ಮತ್ತು ಆತ್ಮವಿಶ್ವಾಸವನ್ನು ಗಳಿಸಲು ಒಂದು ಅವಕಾಶವಾಗಿದೆ. ಅನುಭವದ ಕಲಿಕೆಯು ಸ್ನಾತಕ ವಿದ್ಯಾರ್ಥಿಗಳ ನೈಜ ಜೀವನದಲ್ಲಿ ಪ್ರಾಯೋಗಿಕ ಕೆಲಸದ ಅನುಭವದ ಕಡೆಗೆ ಗುರಿ ಮುಟ್ಟಿಸಲು ನೆರವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗ ಹುಡುಕುವ ಬದಲು ಉದ್ಯೋಗ ನೀಡುವ ಸಾಮರ್ಥ್ಯವನ್ನು ತಿಳಿಸಿಕೊಟ್ಟಂತಾಗುತ್ತದೆ.



ಗ್ರಾಮೀಣ ಅರಿವು ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಗ್ರಾಮೀಣ ಅನುಭವವನ್ನು ಪಡೆಯಲು, ಆತ್ಮವಿಶ್ವಾಸವನ್ನು ಮೂಡಿಸಲು ಮತ್ತು ನೈಜಜೀವನದಲ್ಲಿ ಕೃಷಿ ತೊಂದರೆಗಳನ್ನು ಬಗೆಹರಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

**ಅನುಭವಾತ್ಮಕ ಕಲಿಕೆ**

**ಮುಖ್ಯ ಉದ್ದೇಶಗಳು** : 1. ಅನುಭವಾತ್ಮಕ ಕಲಿಕೆಯಿಂದ ವೃತ್ತಿಪರ ಕೌಶಲ್ಯ ಮತ್ತು ಜ್ಞಾನವನ್ನು ಹೆಚ್ಚಿಸುವುದು.

2. ಯೋಜನೆ ರೀತಿಯಲ್ಲಿ ಕೆಲಸ ಮಾಡಲು ವಿಶ್ವಾಸ ಮತ್ತು ಸಾಮರ್ಥ್ಯವನ್ನು ಬೆಳೆಸುವುದು.

3. ಉದ್ಯಮ ನಿರ್ವಹಣೆ ಸಾಮರ್ಥ್ಯವನ್ನು ಬೆಳೆಸುವುದು.

### ಗ್ರಾಮೀಣ ಜಾಗೃತಿ ಕಾರ್ಯಾನುಭವ ಕಾರ್ಯಕ್ರಮದ ಮುಖ್ಯ ಉದ್ದೇಶಗಳು:

1. ವಿದ್ಯಾರ್ಥಿಗಳಿಗೆ ಕೃಷಿ ಮತ್ತು ಇತರೆ ಚಟುವಟಿಕೆಗಳ ನೈಜ ಜೀವನದ / ನೈಜ ಪರಿಸ್ಥಿತಿಯ ಅವಕಾಶಗಳ ಬಗ್ಗೆ ತಿಳಿಸುವುದು.
2. ರೈತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವುದು.
3. ಪ್ರಾಯೋಗಿಕ ತರಬೇತಿ ಮೂಲಕ ವಿದ್ಯಾರ್ಥಿಗಳಿಗೆ ವಿಶ್ಲೇಷಣಾತ್ಮಕ ಮತ್ತು ಪರಿಹಾರಾತ್ಮಕ ಜ್ಞಾನವನ್ನು ಮೂಡಿಸುವುದು.
4. ಇತ್ತೀಚಿನ ವಿಸ್ತರಣಾ ವಿಧಾನಗಳನ್ನು ಉಪಯೋಗಿಸಿಕೊಂಡು ರೈತರೊಂದಿಗೆ ಪ್ರಭಾವಶಾಲಿ ಸಂವಹನ ಕೌಶಲ್ಯವನ್ನು ವಿದ್ಯಾರ್ಥಿಗಳಲ್ಲಿ ಹೆಚ್ಚಿಸುವುದು.
5. ಕ್ಲಿಷ್ಟಕರ ಕೃಷಿ ಸಮಸ್ಯೆಗಳನ್ನು ಬಗೆಹರಿಸಲು ವಿದ್ಯಾರ್ಥಿಗಳಲ್ಲಿ ವಿಶ್ವಾಸ ಮತ್ತು ಸಾಮರ್ಥ್ಯ ಬೆಳೆಸುವುದು.

– ಮುಂದಿನ ಪುಟಕ್ಕೆ...

–ಹಿಂದಿನ ಪುಟದಿಂದ...

6. ವಿದ್ಯಾರ್ಥಿಗಳಿಗೆ ಇತ್ತೀಚಿನ ವಿಸ್ತರಣಾ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಬಗ್ಗೆ ತಿಳುವಳಿಕೆ ಮೂಡಿಸುವುದು.

**ಕೃಷಿ ಮಹಾವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು ಇಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕೈಗೊಂಡ ವಿವರಗಳು:**

ಕೃಷಿ ಮಹಾವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರಿನಲ್ಲಿ ಈ ಕಾರ್ಯಕ್ರಮವನ್ನು ಮುಂದಾಳತ್ವದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿ ವಿಸ್ತರಣಾ ವಿಭಾಗ ಇದರ ಮುಂದಾಳತ್ವ ವಹಿಸಿಕೊಂಡಿದ್ದು ಕೃಷಿ ವಿಸ್ತರಣಾ ವಿಭಾಗದ ಎಲ್ಲಾ ಪ್ರಾಧ್ಯಾಪಕರುಗಳು ಮತ್ತು ಕಾಲೇಜಿನ ಇತರೆ 18 ವಿಭಾಗಗಳಿಂದ ನೇಮಿಸಲಾದ 38 ಪ್ರಾಧ್ಯಾಪಕರುಗಳು ಈ ಕಾರ್ಯಕ್ರಮಕ್ಕೆ ತಂತ್ರಜ್ಞಾನ ಸಹಕಾರ ನೀಡಿ ವಿದ್ಯಾರ್ಥಿಗಳು ಸುಸೂತ್ರವಾಗಿ ಕಾರ್ಯಕ್ರಮವನ್ನು ನಡೆಸಲು ಸಹಕಾರ ನೀಡುತ್ತಿದ್ದಾರೆ. ಈ ಕಾರ್ಯಕ್ರಮ 04.06.2018ರಂದು ಪ್ರಾರಂಭಗೊಂಡಿದ್ದು 09.11.2018ರವರೆಗೂ ನಡೆದಿದೆ. 2018–19ರ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೈಗೊಂಡಿದ್ದು ಕೋಲಾರದಿಂದ 6 ರೈತ ಸಂಪರ್ಕ ಕೇಂದ್ರಗಳು (ವೇಮಗಲ್, ನರಸಾಪುರ, ವಕ್ಕಲೇರಿ, ಸುಗಟೂರು, ಹೋಳೂರು, ಹುತ್ತೂರು) ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಿಂದ 9 ರೈತ ಸಂಪರ್ಕ ಕೇಂದ್ರಗಳನ್ನು (ಮಂಡಿಕಲ್, ಗುಡಿಬಂಡೆ, ಸೋಮೇನಹಳ್ಳಿ, ಹೊಸೂರು, ತೊಂಡೇಬಾವಿ, ಮಂಚೇನಹಳ್ಳಿ, ಬಾಶೆಟ್ಟಿಹಳ್ಳಿ, ಶಿಡ್ಲಘಟ್ಟ, ಜಂಗಮಕೋಟೆ) ಆಯ್ಕೆ ಮಾಡಿಕೊಳ್ಳಲಾಗಿತ್ತು. ಅದರಲ್ಲಿ ಮುಖ್ಯವಾಗಿ 20.06.2018 ರಿಂದ 24.06.2018 ರವರೆಗೆ ಆಯ್ದ ರೈತ ಸಂಪರ್ಕ ಕೇಂದ್ರಗಳು/ಗ್ರಾಮಗಳಲ್ಲಿ ಮಾಹಿತಿ ಸಂಗ್ರಹಣೆ ಮಾಡಲಾಗಿದ್ದು 25.06.2018 ರಿಂದ 30.06.2018 ರವರೆಗೆ ಮಾಹಿತಿ ವಿಶ್ಲೇಷಣೆ ಮಾಡಿ ಕಾರ್ಯಕ್ರಮ ರೂಪಿಸಿಕೊಂಡು ಸಮಸ್ಯೆಗಳಿಗೆ ಆಧಾರವಾಗಿ ವಿದ್ಯಾರ್ಥಿಗಳಿಗೆ ವಿಷಯ ತಜ್ಞರುಗಳಿಂದ ಪರಿಹಾರಾತ್ಮಕ ವಿಷಯ ತಿಳಿಸಿಕೊಡಲಾಗಿದೆ. ದಿನಾಂಕ 02.07.2018 ರಿಂದ 30.09.2018 ರವರೆಗೆ ಆಯ್ದ 15 ರೈತ ಸಂಪರ್ಕ ಕೇಂದ್ರಗಳು/ಗ್ರಾಮಗಳಲ್ಲಿ 270 ವಿದ್ಯಾರ್ಥಿಗಳನ್ನು ಹಳ್ಳಿಗಳಲ್ಲೇ ವಾಸ್ತವ್ಯ ಮಾಡಿಸಿ ಕಾರ್ಯಕ್ರಮ ನಿಯೋಜಿಸಿದೆ. ಈ ಕಾರ್ಯಕ್ರಮದಲ್ಲಿ 160 ವಿದ್ಯಾರ್ಥಿಗಳು ಅಂತಿಮ ವರ್ಷದ ಬಿ.ಎಸ್ಸಿ.(ಕೃಷಿ) ವಿದ್ಯಾರ್ಥಿಗಳಾಗಿದ್ದು, 55 ವಿದ್ಯಾರ್ಥಿಗಳು ಬಿ.ಎಸ್ಸಿ.(ಕೃಷಿ ಮಾರಾಟ ಮತ್ತು ಸಹಕಾರ) ವಿಭಾಗದ ವಿದ್ಯಾರ್ಥಿಗಳಾಗಿದ್ದು, ಉಳಿದ 55 ವಿದ್ಯಾರ್ಥಿಗಳು ಬಿ.ಟೆಕ್.(ಕೃಷಿ ಇಂಜಿನಿಯರಿಂಗ್) ವಿದ್ಯಾರ್ಥಿಗಳಾಗಿರುತ್ತಾರೆ. ಈ 90 ದಿನಗಳ ಗ್ರಾಮೀಣ ವಾಸ್ತವ್ಯ ಅವಧಿಯಲ್ಲಿ ವಿದ್ಯಾರ್ಥಿಗಳು ರೈತರಿಗೆ ಹೆಚ್ಚಿನ ಜ್ಞಾನಾರ್ಜನೆ ನೀಡುವ ಜೊತೆಗೆ ರೈತರ ಅನುಭವಗಳನ್ನು ವಿದ್ಯಾರ್ಥಿಗಳು ಪಡೆದುಕೊಳ್ಳುವುದು ಮಹತ್ತರವಾಗಿದೆ. ಈ ಅವಧಿಯಲ್ಲಿ ಕೈಗೊಳ್ಳುವ ಮುಖ್ಯಕಾರ್ಯ ಚಟುವಟಿಕೆಗಳೆಂದರೆ: ಸಾಮಾನ್ಯ ಮತ್ತು ಗುಂಪು ಸಭೆಗಳನ್ನು ಏರ್ಪಡಿಸುವುದು, ಕ್ಷೇತ್ರ ಭೇಟಿ, ರೈತ ತರಬೇತಿ ಕಾರ್ಯಕ್ರಮ ಏರ್ಪಡಿಸುವುದು, ಮಣ್ಣು ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ, ಕೃಷಿ ವಸ್ತು ಪ್ರದರ್ಶನ ಏರ್ಪಡಿಸುವುದು, ಪಶು ಚಿಕಿತ್ಸಾ ಶಿಬಿರ, ಗಿಡ ಮರಗಳನ್ನು ನೆಡುವುದು, ಪೌಷ್ಠಿಕಾಂಶ ಕೈತೋಟ ನಿರ್ಮಿಸುವುದು, ಮೌಲ್ಯವರ್ಧಿತ ಆಹಾರ ತಯಾರಿಕೆಯ ಬಗ್ಗೆ ಮಾಹಿತಿ ನೀಡುವುದು, ಕೀಟ ಮತ್ತು ರೋಗ ನಿಯಂತ್ರಣದ ಬಗ್ಗೆ ಅರಿವು ನೀಡುವುದು, ಜೇನು ಸಾಕಾಣಿಕೆ, ಸಂಪನ್ಮೂಲ ನಿರ್ವಹಣೆ, ಇತ್ತೀಚಿನ ತಂತ್ರಜ್ಞಾನಗಳ ಬಗ್ಗೆ ಪ್ರಾತ್ಯಕಿತೆ ಏರ್ಪಡಿಸುವುದು ಮುಖ್ಯ ಕಾರ್ಯಕ್ರಮಗಳಾಗಿರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಈ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ತಾವು ಕಾಲೇಜಿನಲ್ಲಿ ಕಲಿತದ್ದಕ್ಕಿಂತ ಪ್ರಾಯೋಗಿಕವಾಗಿ ಕ್ಷೇತ್ರಮಟ್ಟದಲ್ಲಿ ಕಲಿಯಲು ಹೆಚ್ಚಿನ ಅವಕಾಶ ನೀಡುತ್ತಿದೆ. ಕೃಷಿ ವಿಶ್ವವಿದ್ಯಾನಿಲಯದ ಪದವೀದರರಾಗಲು ಸಂಪೂರ್ಣ ಅರ್ಹತೆಯನ್ನು ಈ ಕಾರ್ಯಕ್ರಮದಿಂದ ಈ ವಿದ್ಯಾರ್ಥಿಗಳು ಉತ್ಸುಕತೆಯಿಂದ ಪಡೆದುಕೊಳ್ಳುತ್ತಿದ್ದಾರೆ. 90 ದಿನಗಳ ಹಳ್ಳಿ ವಾಸ್ತವ್ಯದ ಕಾರ್ಯಕ್ರಮವು ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಹಯೋಗದೊಂದಿಗೆ ರೂಪುಗೊಂಡಿದ್ದು, ಸಂಬಂಧ ಪಟ್ಟ ರೈತ ಸಂಪರ್ಕ ಕೇಂದ್ರಗಳು, ಕೃಷಿ ಇಲಾಖೆ ಸಂಪೂರ್ಣ ಸಹಕಾರ ನೀಡುತ್ತಿವೆ. ಈ ಕಾರ್ಯಕ್ರಮವು 2012 ರಿಂದ ಸುಸೂತ್ರವಾಗಿ ನಡೆದುಕೊಂಡು ಬಂದಿದೆ. ♦

---

– 7ನೇ ಪುಟದಿಂದ...

ವಿಭಿನ್ನವಾಗಿರುವುದು. ಇದರಲ್ಲಿ ಲಕ್ಷಾಂತರ ಎಲೆಗಳು, ರೆಂಬೆ ಕೊಂಬೆಗಳು ಇದ್ದು ಬೃಹದಾಕಾರದ ಮರವಾಗಿರುವುದರಿಂದ ನೋಡಲು ಸುಂದರವಾಗಿದ್ದು, ತಳಭಾಗದ ಉಷ್ಣತೆ ಸುತ್ತಲಿನ ಪರಿಸರಕ್ಕಿಂತ 2$^0$ ರಿಂದ 3$^0$ ಸೆಲ್ಸಿಯಸ್‌ನಷ್ಟು ಕಡಿಮೆಯಿರುವುದು. ಎಲೆಗಳು ಹೃದಯದ ಆಕಾರದಿಂದ ಕೂಡಿದ್ದು, ಮೇಲ್ಭಾಗ ನುಣುಪಾಗಿರುತ್ತದೆ ಮತ್ತು ಹೊಳೆಯುವುದು. ತಣ್ಣನೆ ಗಾಳಿಗೆ ಎಲೆಗಳಿಂದ ಸಂಗೀತದ ನಿನಾದ ಉಂಟಾಗುವುದು.

ಈ ಮರ ಒಂದು ರೀತಿಯಲ್ಲಿ ಹೇಳುವುದಾದರೆ ಉದಾರ ಹೃದಯದ ದಾನಿಯಂತೆ, ಪ್ರಾಣಿಗಳಿಗೆ, ಪಕ್ಷಿಗಳಿಗೆ, ಕ್ರಿಮಿ ಕೀಟಗಳಿಗೆ ಆಶ್ರಯತಾಣವಾಗಿದೆ. ವಿಶೇಷವಾಗಿ ಕೆಂಪು ಬಣ್ಣದ ಹಣ್ಣುಗಳು ಮಂಗಗಳಿಗೆ ಪ್ರಿಯವಾದದ್ದು. ಗಿಳಿಗಳು, ಮರಕುಟಿಗ, ಕಾಗೆಗಳು, ಮೈನಾ, ಅಳಿಲುಗಳು, ಗೂಬೆ, ಹದ್ದುಗಳಿಗೂ ಸಹ ಇದರ ಹಣ್ಣುಗಳು ಆಹಾರವಾಗಿರುತ್ತದೆ ಹಾಗೂ ಅವುಗಳು ಗೂಡುಗಳನ್ನು ಕಟ್ಟಿಕೊಂಡು, ಮರಿಗಳನ್ನು ಸಲಹುವ ಸ್ಥಳವಾಗಿದೆ. ಮನೆಯ ಜಾನುವಾರುಗಳಿಗೂ ಸಹ ಅರಳೀ ಎಲೆಗಳು ಉತ್ತಮವಾದ ಆಹಾರವಾಗಿರುತ್ತದೆ. ಅರಳೀ ಮರಗಳು ಬಹಳ ವರ್ಷ ಬದುಕುವ ಬೃಹದಾಕಾರವಾಗಿರುವುದರಿಂದ ಜೇನು ನೊಣಗಳು ಗೂಡು ಕಟ್ಟುವುದು ಸಾಮಾನ್ಯ ದೃಷ್ಯವಾಗಿರುತ್ತದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಅರಳೀ ಮರಗಳು ವಿವಿಧ ಪ್ರಾಣಿ–ಪಕ್ಷಿಗಳ, ಕೀಟಗಳ ಆಶ್ರಯ ತಾಣವಾಗಿ ಒಂದಕ್ಕೊಂದು ಪೂರಕವಾಗಿ ಜೀವನ ನಡೆಸುವುದು ಗಮನಾರ್ಹ ಸಂಗತಿ. ಅಷ್ಟೇ ಅಲ್ಲದೆ ಇಂಗಾಲಾಮ್ಲ (ಕಾರ್ಬನ್ ಡೈ ಆಕ್ಸೈಡ್)ವನ್ನು ಹಿಡಿದಿಡುವ, ಗಾಳಿಯ ಧೂಳನ್ನು ಮತ್ತು ಶಬ್ದವನ್ನು ಕಡಿಮೆಗೊಳಿಸುವ ಸಾಧನವಾಗಿದೆ.

ಅರಳೀ ಮರ ಋತುಮಾನಕ್ಕನುಗುಣವಾಗಿ ತನ್ನ ಎಲೆಯ ಬಣ್ಣವನ್ನು ಬದಲಾಯಿಸುವವು ಹಾಗೂ ಬೇಸಿಗೆ ಕಾಲದಲ್ಲಿ ಎಲೆಗಳನ್ನು ಉದುರಿಸುವುದರಿಂದ ತೇವಾಂಶದ ಕೊರತೆಯನ್ನು ತಡೆದುಕೊಳ್ಳಲು ಸಾಧ್ಯವಾಗಿದೆ. ಚೈತ್ರ ಮಾಸದಲ್ಲಿ ಚಿಗುರೆಲೆಗಳು ತಿಳಿ ಕೆಂಪು ಬಣ್ಣವನ್ನು ಪಡೆದುಕೊಳ್ಳುವುವು ಹಾಗೂ ಎಲೆಗಳು ಬಲಿತಂತೆ ತಿಳಿ ಹಸಿರಾಗುವುದು ಸಾಮಾನ್ಯ ದೃಷ್ಯವಾಗಿರುತ್ತದೆ.

ಅರಳೀ ಮರಕ್ಕೆ ಸಮಾಜದಲ್ಲಿ ಅತ್ಯುನ್ನತವಾದ ಪಾವಿತ್ರತೆಯನ್ನು ನೀಡಿರುವುದರಿಂದ, ಯಾವುದೇ ಅನೈತಿಕ ಚಟುವಟಿಕೆಗಳು ನಡೆಯುವುದಿಲ್ಲ. ಅರಳೀ ಕಟ್ಟೆಗೆ ದೇವಸ್ಥಾನದ ಗರ್ಭ ಗುಡಿಗೆ ನೀಡಿದ ಪಾವಿತ್ರತೆಯನ್ನು ನೀಡಿ ಗೌರವಿಸಲಾಗಿದೆ. ಅಶ್ವತ್ಥ ಕಟ್ಟೆಯು ಊರ ಮುಂದಿನ ಬಸ್ ನಿಲ್ದಾಣಗಳಲ್ಲಿ ಬಿಸಿಲು, ಗಾಳಿಗೆ ಆಶ್ರಯ ನೀಡುವ ಪ್ರಕೃತಿಯ ಮಂದಿರಗಳಾಗಿರುವುದು ನಿರ್ವಿವಾದ. ಆದುದರಿಂದ ಪರಿಸರ ಸಮತೋಲನ ದೃಷ್ಟಿಯಿಂದ ಗ್ರಾಮ, ಪಟ್ಟಣಗಳು ಮತ್ತು ರಸ್ತೆಗಳ ಇಕ್ಕೆಲಗಳಲ್ಲಿ ಅರಳೀ ಮರಗಳನ್ನು ಬೆಳೆದು ಪ್ರಕೃತಿ ಪ್ರಿಯರಾಗಬೇಕಿದೆ. ♦

# ಪ್ರಾಚೀನ ಭಾರತದಲ್ಲಿ ಅರಣ್ಯಶಾಸ್ತ್ರ





**ಭಾ**ರತದ ಪ್ರಚೀನ ಸಾಹಿತ್ಯದಲ್ಲಿ ಅರಣ್ಯ, ವೃಕ್ಷ, ಮತ್ತು ಮೂಲಿಕೆಗಳ ಉಲ್ಲೇಖಗಳು ಅನೇಕ ಕಡೆ ಇವೆ. ವೇದಗಳಲ್ಲಿ ಅರಣ್ಯವೃಕ್ಷಗಳ ಬಗ್ಗೆ ಪ್ರಸ್ತಾಪವಿದೆ. ಪಾಣಿನಿಯ (ಕ್ರಿ.ಪೂ. 5ನೆಯ ಶತಮಾನ)ಸೂತ್ರಗಳಲ್ಲಂತೂ ವಿವಿಧ ಅರಣ್ಯ ವೃಕ್ಷಗಳು, ಅರಣ್ಯಗಳ ವರ್ಗೀಕರಣ, ಪ್ರಾಮುಖ್ಯ ಇವುಗಳ ಬಗ್ಗೆ ಮಾಹಿತಿ ಇದೆ. **ಪಾಣಿನಿ, ಪ್ರಾಕೃತಿಕ** ಅರಣ್ಯಗಳಾದ **ಪುರಾಗವನ, ಮಿಸ್ರಕವನ** ಮತ್ತು ಉದ್ಯಾನಗಳಾದ **ಅಮರವನ, ಖದಿರವನ, ಇಕ್ಷುವನ** ಇವುಗಳ ಬಗ್ಗೆ ವಿವರ ನೀಡಿದ್ದಾನೆ, ಅರಣ್ಯಶಾಸ್ತ್ರದ ಬಗ್ಗೆ ಪಾಣಿನಿಗಿಂತ ಹಿಂದೆಯೂ ಭಾರತೀಯರಿಗೆ ಸ್ಪಷ್ಟ ಜ್ಞಾನವಿತ್ತು ಎಂದು ಅನೇಕ ವಿದ್ವಾಂಸರು ವಾದಿಸುತ್ತಾರೆ (ಮುಜುಂದಾರ್.1946). ನಮ್ಮ ಮಹಾ ಕಾವ್ಯಗಳಾದ **ರಾಮಾಯಣ, ಮಹಾಭಾರತ**ಗಳಲ್ಲಂತೂ ವೃಕ್ಷಗಳ ಮತ್ತು ಅರಣ್ಯಗಳ ವರ್ಣನೆ ಹೇರಳವಾಗಿ ಬರುತ್ತದೆ. ಈ ವರ್ಣನೆಗಳಲ್ಲಿ **ಪ್ರಾಚೀನ ಬೌದ್ಧ** ಮತ್ತು **ಜೈನಸಾಹಿತ್ಯಗಳೇನೂ** ಕಡಿಮೆ ಇಲ್ಲ. **ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ** ಅಂದಿನ ಅರಣ್ಯ ಶಾಸ್ತ್ರ ಬಗ್ಗೆ ಕೆಲವು ರೂಪರೇಖೆಗಳನ್ನು, ವಿವರಗಳನ್ನು ಕೊಟ್ಟಿದ್ದಾನೆ,

ಆಗಿನ ಕಾಲದಲ್ಲಿ ಅರಣ್ಯಗಳಿಗೆ ಎಷ್ಟು ಪ್ರಾಮುಖ್ಯ ಕೊಡಲಾಗುತ್ತಿತ್ತು, ಅರಣ್ಯಗಳನ್ನು ಮತ್ತು ಅರಣ್ಯೋತ್ಪನ್ನಗಳನ್ನು ಹಾಳು ಮಾಡುವವರಿಗೆ ಯಾವ ಶಿಕ್ಷೆ ಕೊಡಲಾಗುತ್ತಿತ್ತು ಎಂಬ ಬಗ್ಗೆ ಅತ ವಿವರಿಸಿದ್ದಾನೆ. ಆತನೇ ಹೇಳಿಕೊಂಡಿರುವಂತೆ ಅಂದು ಅರಣ್ಯಗಳ ರಕ್ಷಣೆಗೆಂದೇ ಒಬ್ಬ ರಕ್ಷಣಾಧಿಕಾರಿ ಇರುತ್ತಿದ್ದ. ಅವನನ್ನು **ಕುಪ್ಯಾಧ್ಯಕ್ಷ** ಎಂದು ಕರೆಯಲಾಗುತ್ತಿತ್ತು. ಈತ ಅಂದಿನ ಅರಣ್ಯ ಇಲಾಖೆಯ ಮುಖ್ಯಸ್ಥನಾಗಿದ್ದ. ಇವನ ಕೆಲಸ ಅರಣ್ಯಗಳಿಂದ ಬರುವ ಆದಾಯ ಮತ್ತು ಅರಣ್ಯಗಳ ರಕ್ಷಣೆಗೆ ಗಮನಕೊಡುವುದು ಸಾರ್ವಜನಿಕರಿಗೆ ಅರಣ್ಯಗಳ ಬಗ್ಗೆ ತಿಳಿವಳಿಕೆ ನೀಡುವುದೂ ಆಗಿತ್ತು. **ಕುಪ್ಯಾಧ್ಯಕ್ಷನಿಗೆ** ಸಹಾಯಕವಾಗಿರಲು ಅನೇಕ ಕೆಳದರ್ಜೆಯ ಅರಣ್ಯ ಸಂರಕ್ಷಕರಿದ್ದರು. ಹಡಗುಗಳು, ಮನೆಗಳು, ರಥಗಳು, ವ್ಯವಸಾಯದ ಉಪಕರಣಗಳು ಮುಂತಾದುವಕ್ಕೆಲ್ಲ ಯಾವ ಯಾವ ಮರಗಳು ಒಳ್ಳೆಯ ಬಾಳಿಕೆ ಬರುವಂಥವುಗಳು ಎಂಬುದರ ಬಗ್ಗೆ **ಕೌಟಿಲ್ಯನ** ಕಾಲದಲ್ಲೇ ಜನರಿಗೆ ಸ್ಪಷ್ಟ ಪರಿಜ್ಞಾನವಿತ್ತು. **ಶುಕ್ರನೀತಿ ಸಾರದಲ್ಲೂ** ಅರಣ್ಯಶಾಸ್ತ್ರದ ಪ್ರಸ್ತಾಪ ಬರುತ್ತದೆ. ಅರಣ್ಯಗಳ ಮೇಲ್ವಿಚಾರಣೆಗೆ **ವನಸ್ಪತಿಶಾಸ್ತ್ರ ಕೋವಿದನಾದ** ಒಬ್ಬ ಮುಖ್ಯಾಧಿಕಾರಿ ಇರುತ್ತಿದ. ಆತ ಅರಣ್ಯಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ, ಆತನ ಕಾಲದಲ್ಲಿ ಪ್ರತಿ ಆರು ಯೋಜನ ಸುತ್ತಳತೆಯುಳ್ಳ ಎಲ್ಲ ಅರಣ್ಯಗಳೂ ಒಂದೊಂದು ರಾಜಮಾರ್ಗವನ್ನು ಹೊಂದಿರಬೇಕು ಎಂಬ ನಿಯಮವಿತ್ತು. **ಸುಮಂತ್ರ (ಅರ್ಥಸಚಿವ) ರಾಜನಿಗೆ** ರಾಜ್ಯದ ಅರಣ್ಯಗಳ ಬಗ್ಗೆ, ರಾಜಮಾರ್ಗಗಳು, ವ್ಯವಸಾಯ ಯೋಗ್ಯ ಭೂಮಿ ಇವುಗಳ ವಿಷಯವಾಗಿ ವಿವರಗಳನ್ನು ಒದಗಿಸಬೇಕಾಗಿತ್ತು. ಉಪಯುಕ್ತ ಮರಗಳನ್ನೇ ಅರಣ್ಯಗಳಲ್ಲಿ ಹೆಚ್ಚಾಗಿ ರಕ್ಷಿಸಲು, ಬೆಳೆಸಲು ಪ್ರೋತ್ಸಾಹಿಸಲಾಗುತ್ತಿತ್ತು. **ಶುಕ್ರಾಚಾರ್ಯರು** ಈ ಕೆಲಸಕ್ಕೆ ಸಸ್ಯಜ್ಞಾನದಲ್ಲಿ ಚೆನ್ನಾಗಿ ಪರಿಜ್ಞಾನ, ಪರಿಶ್ರಮಗಳಿರುವ ವ್ಯಕ್ತಿಗಳು ಬೇಕು ಎಂಬ ಬಗ್ಗೆ ಅಂದೇ ಹೇಳಿರುವುದು ಮೆಚ್ಚಬೇಕಾದ ವಿಷಯ. ♦

## ಶ್ರದ್ಧಾಂಜಲಿ



**ಶ್ರೀ. ನಾಗರಾಜ,** ಭಾ.ಅ.ಸೇ(ನಿ)

(07.08.1957–22.08.2019)

**ಶ್ರೀ. ನಾಗರಾಜ** ಅವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ **ಕೆಸ್ತೂರು** ಗ್ರಾಮದಲ್ಲಿ ಜನಿಸಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಬಿ.ಎಸ್.ಸಿ.(ಕೃಷಿ) ಪದವಿ ಪಡೆದರು. ಕಷ್ಟಪಟ್ಟು ವಿದ್ಯಾಬ್ಯಾಸ ಮಾಡಿ ಅಖಿಲ ಭಾರತ ಸೇವೆಯಲ್ಲಿ ಒಂದಾದ ಭಾ.ಅ.ಸೇ.(ಐ.ಎಫ್.ಎಸ್.)ಯನ್ನು ಗಳಿಸಿ 1986ರಲ್ಲಿ **ಕರ್ನಾಟಕ ಅರಣ್ಯ ಇಲಾಖೆಯಲ್ಲಿ** ಎ.ಸಿ.ಎಫ್ ಹುದ್ದೆಯಿಂದ ಹಿಡಿದು **ಎ.ಪಿ.ಸಿ.ಸಿ.ಎಫ್.** ಹುದ್ದೆಯವರೆಗೆ ಕರ್ತವ್ಯ ನಿರ್ವಹಿಸಿ ಆಗಸ್ಟ್ 2017ರಲ್ಲಿ ನಿವೃತ್ತರಾದರು. **ನಾಗರಾಜ** ಇವರು ಅತ್ಯಂತ ಸರಳ, ಸಜ್ಜನ, ವಿನಯ ಸಂಪನ್ನ ವ್ಯಕ್ತಿಯಾಗಿದ್ದರು. ಸ್ನೇಹಜೀವಿ ಹಾಗೂ ಉದಾರಿಯಾಗಿದ್ದ ಇವರು ಬೆಂಗಳೂರಿನ **ಕೃಷಿ–ಅರಣ್ಯ ಸಂಸ್ಥೆ** ಹಾಗೂ ಮಂಡ್ಯ **ಜಿಲ್ಲಾ ಕೃಷಿ ವಿಜ್ಞಾನ ಪದವೀಧರರ ಸಂಘದ** ಕಾರ್ಯಕಾರಿ ಸಮಿತಿಯಲ್ಲಿ ಸಕ್ರಿಯ ಸದಸ್ಯರಾಗಿದ್ದರು. ಇವರು **ಕರ್ನಾಟಕ ಗೇರು ಅಭಿವೃದ್ಧಿ ನಿಗಮದಲ್ಲಿ** ವ್ಯವಸ್ಥಾಪಕ ನಿರ್ದೇಶಕರಾಗಿದ್ದಾಗ ಮಂಡ್ಯ ಜಿಲ್ಲೆಗೆ **ಗೋಡಂಬಿ ಬೆಳೆಯನ್ನು** ರೈತರ ಜಮೀನಿನಲ್ಲಿ ಬೆಳೆಸಲು ಮಾರ್ಗದರ್ಶಕರಾದರು. ನಿವೃತ್ತಿ ನಂತರ ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯಲ್ಲಿ ಕಾರ್ಯಕಾರಿಣಿ ಸದಸ್ಯರಾಗಿ ತಮ್ಮನ್ನು ಗುರುತಿಸಿಕೊಂಡಿದ್ದರು. ಶ್ರೀ ನಾಗರಾಜರವರು ಇದೇ ಆಗಸ್ಟ್ ತಿಂಗಳು 22 ರಂದು ಇಹಲೋಕ ತ್ಯಜಿಸಿದರು. ಮೃತರು ಪತ್ನಿ, ಒಬ್ಬ ಮಗ, ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರೋಣ.

**ಆಡಳಿತ ಮಂಡಳಿ**

**ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ), ಬೆಂಗಳೂರು**

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ಆಡಳಿತ ಮಂಡಳಿ


ಶ್ರೀ ದೀಪಕ್ ಶರ್ಮಾ
**ಅಧ್ಯಕ್ಷರು**
ದೂ: 9986232094


ಶ್ರೀ ಎನ್. ಸಂಪಂಗಿ
ಸಹ–ಅಧ್ಯಕ್ಷರು
ದೂ: 9980294242


ಶ್ರೀ ಆರ್.ಎಮ್. ಪಾಲಣ್ಣ
ಉಪಾಧ್ಯಕ್ಷರು
ದೂ: 9945015617


ಶ್ರೀ ಎ.ಎಂ. ಅಣ್ಣಯ್ಯ
ಕಾರ್ಯದರ್ಶಿ
ದೂ: 9448019306


ಡಾ.ಎಮ್.ಮಹದೇವ ಮೂರ್ತಿ
ಸಹ–ಕಾರ್ಯದರ್ಶಿ
ದೂ: 9845588203


ಶ್ರೀ ಕೆ.ಎಸ್. ಆನಂದ್
ಖಜಾಂಚಿ
ದೂ: 9448943995


ಡಾ. ಎಮ್. ಮಹಾದೇವಪ್ಪ
ಸದಸ್ಯರು
ದೂ: 9448360991


ಶ್ರೀ ಎನ್.ಡಿ ತಿವಾರಿ
ಸದಸ್ಯರು
ದೂ: 9448360161


ಶ್ರೀ ಬಿ. ಶಿವನಗೌಡ
ಸದಸ್ಯರು
ದೂ: 9448124087


ಶ್ರೀ ಸಿದ್ದೇಗೌಡ
ಸದಸ್ಯರು
ದೂ: 9449244323


ಶ್ರೀ ಎಸ್. ನಾರಾಯಣಸ್ವಾಮಿ
ಸದಸ್ಯರು
ದೂ: 9880042155


ಶ್ರೀ ಬಿ.ಎಸ್. ರಘುನಾಥ
ಸದಸ್ಯರು
ದೂ: 9945003993


ಡಾ॥ ಎನ್. ಸ್ವಾಮಿರಾವ್
ಸದಸ್ಯರು
ದೂ: 9880101200


ಶ್ರೀಮತಿ ಶೋಭ ಎಚ್.ಜಿ.
ಸಹ ಸದಸ್ಯರು
ದೂ: 9448945367

ವಿದ್ಯೆ ಗುರುಗಳ ಗುರು - ಭ್ರತೃ ಹರಿ.

# ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ನಡೆಸಿದ ವಿವಿಧ ಚಟುವಟಿಕೆಗಳ ಚಿತ್ರಗುಚ್ಛ



ವಿಳಾಸ : "ಕೃಷಿವನ" ತ್ರೈಮಾಸಿಕ ಪತ್ರಿಕೆ, ಕೃಷಿ ಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ(ನೊ) ವನವಿಕಾಸ,
ನೆಲಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ದೂ: 080 23566126
Email: iaftbangalore@gmail.com